ಪ್ರೊ. ಎಸ್. ಕೆ. ರಾಮಚಂದ್ರ ರಾವ್



ಕನ್ನಡನಾಡಿನಲ್ಲಿ ಆಯುರ್ವೇದ

427

ಕನ್ನಡನಾಡಿನಲ್ಲಿ ಆಯುರ್ವೇದ

ವಿದ್ಯಾಲಂಕಾರ ಪ್ರೊ. ಎಸ್. ಕೆ. ರಾಮಚಂದ್ರ ರಾವ್

ಐಬಿಎಚ್ ಪ್ರಕಾಶನ
ಗಾಂಧಿನಗರ, ಬೆಂಗಳೂರು–560 009

KANNADANADINALLI AYURVEDA — a monograph on Ayurveda system of Medicine in Karnataka, written in Kannada by Prof. S. K. Ramachandra Rao and Published by P.N. Kamat, IBH Prakashana, Gandhinagar, Bangalore-560 009.

ಬೆಲೆ ರೂ. 2–00

Copyright © 1980 by the Publisher.

ಮುಖಪುಟ : ಮನೋಹರ್

ಚಿತ್ರಗಳು : ಲೇಖಕರು

ಮೊದಲ ಮುದ್ರಣ : 1980. ಪ್ರಕಾಶಕರು : ಪಿ. ಎನ್. ಕಾಮತ್ ಐಬಿಎಚ್ ಪ್ರಕಾಶನ ಐದನೆಯ ಮುಖ್ಯರಸ್ತೆ, ಗಾಂಧಿನಗರ ಬೆಂಗಳೂರು 560 009 ಮುದ್ರಕರು : ಎಚ್. ಎಸ್. ಎನ್. ರಾವ್ ಐಬಿಎಚ್ ಪ್ರಕಾಶನ ಪ್ರಿಂಟರಿ ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್ ಬೆಂಗಳೂರು 560 054.

Paper used for printing this book was made available by the Government of India at concessional rate.

ಆಯುರ್ವೇದದ ಸ್ಥಿತಿಗತಿ

ಆಯುರ್ವೇದವು ನಮ್ಮ ದೇಶದಲ್ಲಿ ಏನಿಲ್ಲವೆಂದರೂ ಏಳೆಂಟು ಸಾವಿರ ವರ್ಷಗಳಿಂದ ಬಳಕೆಯಲ್ಲಿರುವ ಚಿಕಿತ್ಸಾ ಪದ್ಧತಿ. ಋಗ್ವೇದದ ಮಂತ್ರಗಳಲ್ಲೇ ಅದರ ಬಳಕೆಯ ಕುರುಹುಗಳನ್ನು ಕಾಣುತ್ತೇವೆ. ಅಥರ್ವವೇದದಲ್ಲಂತೂ ಇವು ಧಾರಾಳವಾಗಿ ಸಿಗುತ್ತವೆ. ಮೊದಲಿಗೆ ಇದು ಶಾಸ್ತ್ರವೆಂದೇನು ಎನಿಸಿರಲಿಲ್ಲ. ವೈದ್ಯವು ವಿದ್ಯೆಯಾಗಿ ಮೈದಳೆಯುವ ಮೊದಲು ಜನರನ್ನು ರೋಗ–ರುಜಿನೆಗಳು ಕಾಡುತ್ತಿರಲಿಲ್ಲವೆ? ಅಂಥ ಜಡ್ಡುಗಳಿಗೆ ಅವರು ಮದ್ದು ಮಾಡಿಕೊಳ್ಳುತ್ತಿರಲಿಲ್ಲವೆ? ಪ್ರಕೃತಿಯೊಡನೆ ಮನುಷ್ಯನ ನಂಟು ಇನ್ನೂ ನಿಕಟವಾಗಿಯೇ ಇದ್ದಾಗ, ಜಡ್ಡಿಗೆ ತಕ್ಕ ಮದ್ದು ಅವರಿಗೆ ತಟ್ಟನೆ ತಿಳಿಯುತ್ತಿದ್ದಿತು. ಸುತ್ತಮುತ್ತಲ ಗಿಡಗೆಂಟೆಗಳಿಂದಲೇ ಅವರು ತಮ್ಮ ನೋವನ್ನು ನಿವಾರಿಸಿಕೊಳ್ಳುತ್ತಿದ್ದರು. ಅಂಥ ಕಾಲದಲ್ಲಿಯೇ ಆಯುರ್ವೇದ ಮೊದಲಾಯಿತು.

ಬರುಬರುತ್ತ ಈ ವಿಚಾರವಾಗಿ ಆಸಕ್ತಿ ಕುದುರಿ, ತಿಳಿದವರು ಕಲೆತು ಮಾತನಾಡಿ ಯಾವ ಯಾವ ಜಾಡ್ಯ, ಎಂಥೆಂಥ ಮದ್ದು, ಯಾವ ಗಿಡದಿಂದ ಏನು ಉಪಯೋಗ ಮೊದಲಾದ ವಿಚಾರಗಳನ್ನೆಲ್ಲ ಗಟ್ಟಿಮಾಡಿಕೊಂಡು, ಅವನ್ನೆಲ್ಲ ಓರಣವಾಗಿ ಬರೆದಿಟ್ಟರು. ಇಂಥ ಬರಹಗಳು ತುಂಬ ಹಿಂದೆಯೇ ಸಿದ್ಧವಾದುವು. ಕಾಲಕ್ರಮದಲ್ಲಿ ಮಾರ್ಪಟ್ಟು, ಹಿಗ್ಗಿ, ಇನ್ನಷ್ಟು ಸ್ಪಷ್ಟವಾಗಿ, ಅನುಭವವನ್ನೆಲ್ಲ ಅಳವಡಿಸಿಕೊಂಡು, ಶಾಸ್ತ್ರವೆಂದು ಮೈದಳೆದದ್ದು ಕ್ರಿಸ್ತಪೂರ್ವ ಹಲವು ನೂರು ವರ್ಷಗಳ ಹಿಂದೆಯೇ. ಇವನ್ನೇ ಸಂಹಿತೆಗಳೆನ್ನುತ್ತಾರೆ.

ಕ್ರಿಸ್ತಯುಗ ಮೊದಲಾದ ಆಸುಪಾಸಿನಲ್ಲಿ ಈ ಸಂಹಿತೆಗಳು ಚರಕ, ಸುಶ್ರುತ ಮೊದಲಾದ ಋಷಿಗಳಿಂದ ಪರಿಷ್ಕೃತವಾಗಿ ಆಯುರ್ವೇದ ವಿದ್ಯೆ ಖಚಿತವಾಯಿತು. ನಾಡಿನಲ್ಲೆಲ್ಲ ಇದರ ಹರವು ಹೆಚ್ಚಿತು. ಇಡೀ ದೇಶಕ್ಕೆ ಒಂದೇ ವೈದ್ಯಶಾಸ್ತ್ರವಾಗಿ ನಿಂತಿತು. ಹದಿನೈದು ಹದಿನಾರನೆಯ ಶತಮಾನಗಳಲ್ಲಿ ಮುಗಲ ಅರಸರು ಪ್ರಬಲರಾಗಿ ಹೊರಗಿನ ಯುನಾನಿ ವೈದ್ಯವನ್ನು ಇಲ್ಲಿಗೆ ತಂದು ಹರಡುವವರೆಗೆ ಆಯುರ್ವೇದವೊಂದೆ ವೈದ್ಯಪದ್ಧತಿ ಯಾಗಿದ್ದಿತು. ಧರ್ಮಕ್ಕೂ ಆಯುರ್ವೇದಕ್ಕೂ ಹತ್ತಿರ ಸಂಬಂಧ ವಿದ್ದುದರಿಂದ, ರಾಜಕಾರಣದ ಬಿರುಗಾಳಿ ಧರ್ಮಕ್ಕೆ ಒಗ್ಗದೆ ಇದ್ದಾಗ ಆಯುರ್ವೇದವೂ ಹಿಂದಕ್ಕೆ ಬಿದ್ದಿತು. ಮುಂದೆ ಒಂದೆ ರಡು ಶತಮಾನಗಳಲ್ಲಿ ಐರೋಪ್ಯರು ಇಲ್ಲಿಗೆ ನುಗ್ಗಿ ನಾಡಿನ ಆಡಳಿತವನ್ನು ತಮ್ಮದಾಗಿ ಮಾಡಿಕೊಂಡಮೇಲೆ, ಯುರೋಪಿ ನಲ್ಲಿ ತಲೆಯೆತ್ತಿಕೊಳ್ಳುತ್ತಿದ್ದ ವೈದ್ಯಪದ್ಧತಿಯೇ ಇಲ್ಲಿ ಬಳಕೆಗೆ ಬರತೊಡಗಿತು.

ಹೀಗೆ ಹೊರದೇಶದಿಂದ ಒಳನುಗ್ಗಿದ ವೈದ್ಯಪದ್ಧತಿಗೆ ಇಲ್ಲಿನ ಆಳರಸರ ಅನುಗ್ರಹ, ಅಧಿಕಾರಿಗಳ ಆದರ, ಮಹಾಜನರ ಅನುಕರಣೆ ಎಲ್ಲವೂ ಒದಗಿ ಆ ಪದ್ಧತಿಯೇ ಪ್ರಬಲವಾಯಿತು. ಆಯುರ್ವೇದಕ್ಕೆ ಅರೆಮನಸ್ಸಿನ ಒತ್ತಾಸೆ ಕೆಲವು ಅರಸೊತ್ತಿಗೆ ಗಳಿಂದ ಕೆಲಕಾಲ ದೊರೆತು ಕೊನೆಗೆ ಅದೂ ನಿಂತಿತು. ಹಲವು ಹಿರಿಯ ವೈದ್ಯರು ಹೆಣಗಾಡಿ ಅಷ್ಟಿಷ್ಟು ಆಯುರ್ವೇದವನ್ನು ಉಳಿಸಿಕೊಂಡರು. ದೇಶ ಸ್ವತಂತ್ರವಾದ ಮೇಲೆ ನಮ್ಮ ಸಂಸ್ಕೃತಿ ಯನ್ನು ಕುರಿತು ಜನರಿಗೆ ಹೆಚ್ಚಿನ ಅಭಿಮಾನ ಬಂದೀತೆಂದೂ, ಸಂಸ್ಕೃತಿಯ ಅಂಗವಾದ ಆಯುರ್ವೇದಕ್ಕೆ ಉತ್ತೇಜನ ದೊರೆ ತೀತೆಂದೂ ನಿರೀಕ್ಷೆಯಿದ್ದುದು ಸಹಜವೆ. ಆದರೆ ಈ ನಿರೀಕ್ಷೆ ಕೈಗೂಡುವ ಕಾಲ ಇನ್ನೂ ಬಂದಂತಿಲ್ಲ.

ಈ ನಡುವೆ ಪ್ರಪಂಚದಲ್ಲಿಯೇ ಆಧುನಿಕ ವೈದ್ಯವಿದ್ಯೆಯಲ್ಲಿ ಕೊಂಚ ಗೊಂದಲವೂ ಒಂದು ಆಂದೋಲನವೂ ಒದಗಿ ಹಳೆಯ ವೈದ್ಯಪದ್ಧತಿಯ ವಿವರಗಳನ್ನು ಅರಿತುಕೊಳ್ಳುವ ಕುತೂಹಲ ಉಂಟಾಗಿದೆ. ಆಧುನಿಕ ಆರ್ಥಿಕ–ರಾಜಕಾರಣ ದೃಷ್ಟಿಯಿಂದ ಹಿಂದುಳಿದ ದೇಶದಲ್ಲಿ (ಆಫ್ರಿಕ, ಏಶಿಯಾ ಖಂಡಗಳಲ್ಲಿ), ಪ್ರಾಚೀನ ಬುಡಕಟ್ಟುಗಳ ಜನರಲ್ಲಿ ಬಳಕೆಯಲ್ಲಿರುವ ವೈದ್ಯಪದ್ಧತಿಗಳನ್ನು ಅಧ್ಯಯನ ಮಾಡಬೇಕೆಂಬ ತವಕ ವಿಶ್ವ ಆರೋಗ್ಯ ಸಂಸ್ಥೆಗೇ ಒದಗಿದೆ. ಈ ಸಂದರ್ಭದಲ್ಲಿ ಆಯುರ್ವೇದ ಮತ್ತೆ ತಲೆಯೆತ್ತಬಹುದೆಂಬ ಎಣಿಕೆ ಹಲವರಿಗಿದೆ.

ಗೊತ್ತು – ಗುರಿ

ಆಯುರ್ವೇದವೆಂದರೆ ಮನುಷ್ಯನ ಆಯುಸ್ಸನ್ನು ಕುರಿತ ಶಾಸ್ತ್ರ. ಆಯುಸ್ಸೆಂದರೆ ಬಾಳುವೆಯಲ್ಲಿ ಒದಗಿಬರುವ ಒಳ್ಳೆಯದು, ಕೆಟ್ಟದು (ಹಿತ, ಅಹಿತ); ಸುಖ, ದುಃಖ, ಇವೆಲ್ಲಕ್ಕೂ ಮೂಲವಾದ ಶರೀರದ ನೆಮ್ಮದಿ. ಅದನ್ನು ತಿಳಿಸಿಕೊಡುವ, ಒದಗಿಸಿಕೊಡುವ, ವಿದ್ಯೆಯೇ ವೇದ. ಆಯುರ್ವೇದವನ್ನು ಅಥರ್ವವೇದಕ್ಕೆ ಉಪವೇದವೆಂದೂ ಉಪಾಂಗವೆಂದೂ ಹೇಳುವುದಿದೆ: ಅದೇ ಐದನೆಯ ವೇದವೆಂದೂ ಎಣಿಸುವುದಿದೆ. ಜಗತ್ತನ್ನು ಸೃಷ್ಟಿಮಾಡಿದ ಬ್ರಹ್ಮನು (ದಕ್ಷಪ್ರಜಾಪತಿ) ಅಶ್ವಿನಿ ದೇವತೆಗಳಿಗೆ ಈ ವಿದ್ಯೆಯನ್ನು ಕಲಿಸಿದನೆಂದೂ, ಅವರಿಂದ ಇಂದ್ರನು ಕಲಿತನೆಂದೂ, ಭಾರದ್ವಾಜನೆಂಬ ಋಷಿಯು ಇಂದ್ರನಿಂದ ಇದನ್ನು ಕಲಿತು ಮನುಷ್ಯರ ನಡುವೆ ತಂದನೆಂದೂ ಒಕ್ಕಣೆಯಿದೆ.

ಭಾರದ್ವಾಜ ಋಷಿಯು ಪಾಂಚಾಲದೇಶದ ಕಾಂಪಿಲ್ಯವೆಂಬಲ್ಲಿ ಇದ್ದವನೆಂದೂ, ಅವನಲ್ಲದೆ ಆತ್ರೇಯ ಪುನರ್ವಸು

ವೆಂಬ ಋಷಿಯು ಆಯುರ್ವೇದವನ್ನು ಅಧ್ಯಯನಮಾಡಿ, ತನ್ನ ಆರು ಮಂದಿ ಶಿಷ್ಯರಿಗೆ ಪಾಠ ಹೇಳಿದನೆಂದೂ ಪ್ರತೀತಿ. ಈ ಆರು ಜನರಲ್ಲಿ ಅಗ್ನಿವೇಶ ಎಂಬುವನೊಬ್ಬ ತಾನು ಗುರುವಿನಿಂದ ಕಲಿತದ್ದನ್ನು ಪುಸ್ತಕವಾಗಿ ಬರೆದಿಟ್ಟನಂತೆ: ಇದು ಅಗ್ನಿವೇಶ ತಂತ್ರವೆಂದು ಪ್ರಸಿದ್ಧವಾಯಿತು. ಉಳಿದ ಶಿಷ್ಯರೂ ಹಾಗೆಯೇ ತಂತಮ್ಮ ತಂತ್ರಗಳನ್ನು ಸಿದ್ಧಪಡಿಸಿದರಂತೆ. ಅವು ಅಷ್ಟಾಗಿ ಬಳಕೆಗೆ ಬರಲಿಲ್ಲ. ಕ್ರಿಸ್ತಯುಗದ ಮೊದಲ ಶತಮಾನದಲ್ಲಿ (79ರ ಸುಮಾರಿಗೆ) ಬದುಕಿದ್ದ ಚರಕನೆಂಬ ಋಷಿಯು ಅಗ್ನಿವೇಶ ತಂತ್ರವನ್ನು ಪರಿಷ್ಕರಿಸಿ ಚರಕಸಂಹಿತೆಯನ್ನು ರಚಿಸಿದನು. ಇದರಲ್ಲಿ ಮನುಷ್ಯನ ಬದುಕಿನಲ್ಲಿ ಬರಬಹುದಾದ ರೋಗ-ರುಜಿನೆಗಳಿಗೆ ಮದ್ದನ್ನು ಕುರಿತು ವಿಸ್ತಾರವಾಗಿ ವಿವೇಚನೆಯಿದೆ; ರೋಗ-ರುಜಿನೆಗಳು ಒದಗುವ ಬಗೆಯನ್ನೂ ವಿವರಿಸಿದ್ದಾನೆ; ರೋಗ-ರುಜಿನೆಗಳನ್ನು ಕಂಡುಕೊಳ್ಳುವ ಬಗೆಗಳನ್ನೂ ಪ್ರಸ್ತಾಪಿಸಿದ್ದಾನೆ. ಇವು ಮೂರೂ (ಔಷಧಿ, ಹೇತು, ಲಿಂಗ) ಆಯುರ್ವೇದದ ಮೂರು ಮುಖಗಳಾದುವು. ಹೀಗೆಂದೇ ತ್ರಿಸ್ಕಂಧಆಯುರ್ವೇದವೆನ್ನುತ್ತಾರೆ.

ಚರಕ ಸಂಹಿತೆಗೆ ಸುಮಾರು ಐವತ್ತು ವ್ಯಾಖ್ಯಾನಗಳು ಸಿದ್ಧವಾದುವು. ಒಂಬತ್ತನೆಯ ಶತಮಾನದಲ್ಲಿದ್ದ ದೃಢಬಲ, ಹನ್ನೊಂದನೆಯ ಶತಮಾನದಲ್ಲಿದ್ದ ಚಕ್ರಪಾಣಿದತ್ತ ಇವರ ವ್ಯಾಖ್ಯಾನಗಳು ಪ್ರಸಿದ್ಧವಾಗಿವೆ. ದೃಢಬಲನು ಚರಕಸಂಹಿತೆಯನ್ನು ಮತ್ತೊಮ್ಮೆ ಪರಿಷ್ಕರಿಸಿ ಕೆಲವು ಭಾಗಗಳನ್ನು ಸೇರಿಸಿದ್ದಾನೆ. ಇಂದು ಉಳಿದು ಬಂದಿರುವ ಚರಕಸಂಹಿತೆ ದೃಢಬಲನು ಪರಿಷ್ಕರಿಸಿ ಹಿಗ್ಗಿಸಿರುವುದೇ. ಚರಕನ ಜಾಡನ್ನು ಹಿಡಿದುಹೊರಟ ವೈದ್ಯಪದ್ಧತಿಗೆ 'ಕಾಯಚಿಕಿತ್ಸೆ'ಯೆಂದು ಹೆಸರು.

ಧನ್ವಂತರಿ - ದಿವೋದಾಸನೆಂಬುವನು ಕಾಶಿಯ ರಾಜನಾಗಿದ್ದನಂತೆ. ಇವನೂ ಇಂದ್ರನಿಂದ ಆಯುರ್ವೇದವನ್ನು ಕಲಿತು ತನ್ನ ಶಿಷ್ಯರಿಗೆ ತಿಳಿಯಪಡಿಸಿದನು. ಇವನ ಶಿಷ್ಯರಲ್ಲಿ ಪ್ರಮುಖನಾದವನು ಸುಶ್ರುತನೆಂಬುವನು. ಇವನ ಕಾಲ ಕ್ರಿಸ್ತಾಬ್ದ ಮೂರನೆಯ ಶತಕದ ಸುಮಾರು ಎಂದು ಹೇಳುತ್ತಾರೆ; ಚರಕನಿಗಿಂತ ಈಚಿನವನು. ಇವನು ಬರೆದಿರುವ ಸಂಹಿತೆಯಲ್ಲಿ ಶಸ್ತ್ರಚಿಕಿತ್ಸೆಗೆ ಹೆಚ್ಚಿನ ಗಮನ ಹರಿದಿದೆ. ಇದನ್ನು ಶಲ್ಯಾಂಗವೆಂದು ಕರೆಯುತ್ತಾರೆ. ನಾಗಾರ್ಜುನನೆಂಬುವನು ಪರಿಷ್ಕರಣಮಾಡಿರುವ ಸುಶ್ರುತ ಸಂಹಿತೆ ಇಂದು ನಮಗೆ ದೊರೆತಿರುವುದು. ಈ ಸಂಹಿತೆಗೆ ಹತ್ತನೆಯ ಶತಮಾನದಲ್ಲಿ ಡಲ್ಹಣನೂ ಹನ್ನೊಂದನೆಯ ಶತಮಾನದಲ್ಲಿ ಚಕ್ರಪಾಣಿದತ್ತನೂ ವ್ಯಾಖ್ಯಾನಗಳನ್ನು ಬರೆದಿದ್ದಾರೆ.

ಇವೆರಡೂ ಆಯುರ್ವೇದದ ಎರಡು ಮುಖ್ಯ ಕವಲುಗಳು. ಹಲವು ಕಾರಣಗಳಿಂದ ಸುಶ್ರುತನ ಜಾಡು (ಶಲ್ಯಾಂಗ ಅಥವಾ ಧಾನ್ವಂತರ ಸಂಪ್ರದಾಯ) ಮರೆಯಾಯಿತು. ಬರುಬರುತ್ತ ಕಾಯಚಿಕಿತ್ಸೆಯೇ ಆಯುರ್ವೇದದ ದಾರಿಯಾಯಿತು. ಕ್ರಿಸ್ತಾಬ್ದ ಎಂಟನೆಯ ಶತಮಾನದ ಸುಮಾರಿಗೆ ಸಿಂಧೂದೇಶದ ವಾಗ್ಭಟನೆಂಬುವನು ಚರಕ, ಸುಶ್ರುತ ಇಬ್ಬರ ಸಂಹಿತೆಗಳನ್ನೂ ಅಳವಡಿಸಿಕೊಂಡು 'ಅಷ್ಟಾಂಗ-ಸಂಗ್ರಹ' ಮತ್ತು 'ಅಷ್ಟಾಂಗ-ಹೃದಯ'ಗಳೆಂಬ ಗ್ರಂಥಗಳನ್ನು ಸಿದ್ಧಮಾಡಿದನು. ಇವುಗಳಲ್ಲಿ ಮೊದಲನೆಯದು ದಕ್ಷಿಣ ದೇಶದಲ್ಲಿ ತುಂಬ ಬಳಕೆಗೆ ಬಂದಿತು. ಇದರ ವ್ಯಾಖ್ಯಾನಕಾರರಲ್ಲಿ ಪ್ರಸಿದ್ಧನಾದ ಅರುಣದತ್ತನು ಬಂಗಾಳದವನು; ಇನ್ನೊಬ್ಬ ಹೇಮಾದ್ರಿ ಕನ್ನಡನಾಡಿನವನು. ಬಂಗಾಳ, ಕನ್ನಡನಾಡು, ಕೇರಳ ಈ ಪ್ರಾಂತ್ಯಗಳಲ್ಲಿ ಈ ಗ್ರಂಥದ ಆಧಾರದ ಮೇಲೇ ಆಯುರ್ವೇದ ವಿದ್ಯೆಯು ಬೆಳೆಯಿತು.

ಶರೀರದಲ್ಲಾಗುವ ತೊಂದರೆಗಳನ್ನು ಗುಣಪಡಿಸಲು ಗಿಡ–ಮರಗಳ ನಾರು, ಬೇರು, ಎಲೆ, ಹಣ್ಣು, ಕಾಯಿ, ತೊಗಟೆ, ಬೀಜಗಳನ್ನೇ ಬಳಸುವುದು ಆಯುರ್ವೇದದಲ್ಲಿ ಹೆಚ್ಚು. ಔಷಧಿ ವನಸ್ಪತಿಗಳೆಂದರೆ ಮದ್ದಿಗೆ ನೆರವಾಗುವ ಗಿಡಮರಗಳೆಂದೇ ಅರ್ಥ. ಔಷಧಿ ಎನ್ನುವ ಮಾತಿನಲ್ಲಿ ಇದೇ ಧ್ವನಿಯಿದೆ. ಮೊದಲಿನಿಂದಲೂ, ನಮ್ಮ ವೈದ್ಯದಲ್ಲಿ ಪರಿಸರದಲ್ಲಿರುವ ಗಿಡಗೆಂಟೆಗಳ ಸ್ವಭಾವವನ್ನೂ ಗುಣದೋಷಗಳನ್ನೂ ಅರಿತುಕೊಂಡು,ರೋಗ-ರುಜಿನೆಗಳಿಗೆ ಅವುಗಳ ನೆರವನ್ನು ಪಡೆದುಕೊಳ್ಳುವ ಉತ್ಸಾಹ ಕಂಡುಬರುತ್ತದೆ. ಎಲ್ಲರಿಗೂ ಸುಲಭವಾಗಿ ಎಲ್ಲ ಕಾಲಗಳಲ್ಲೂ ಸಿಗಬಹುದಾದ ಗಿಡಗಳಲ್ಲಿ ಯಾವ ಯಾವ ಗಿಡಗಳನ್ನು ಯಾವ ಯಾವ ರೋಗಗಳಿಗೆ ಮದ್ದಾಗಿ ಬಳಸಬಹುದು ಎಂಬುದು ಆಯುರ್ವೇದದಲ್ಲಿ ಮುಖ್ಯ ವಿಚಾರ. ಚರಕನು ಹೇಳಿರುವ ಮದ್ದುಗಳಲ್ಲಿ 241, ಸುಶ್ರುತನು ಹೇಳಿರುವ ಮದ್ದುಗಳಲ್ಲಿ 235, ಇಂಥ ಔಷಧಿಗಳೇ. ಬರುಬರುತ್ತ ಇವುಗಳ ಸಂಖ್ಯೆ ಬೆಳೆಯಿತು.

ಮನುಷ್ಯನ ಶರೀರವು ಆಕಾಶ, ಗಾಳಿ, ಬೆಂಕಿ, ನೀರು, ನೆಲ ಎಂಬ ಐದು ಭೂತಗಳಿಂದಾದುದೆಂದೂ, ಇವುಗಳಿಗೆ ಸತ್ವ, ರಜಸ್ಸು ತಮಸ್ಸು ಎಂಬ ಮೂರು ಗುಣಗಳೇ ಮೂಲವೆಂದೂ, ಈ ಪಂಚಭೂತ ಮತ್ತು ತ್ರಿಗುಣ ಇವುಗಳ ಫಲವಾಗಿ ಮನುಷ್ಯನ ಶರೀರವನ್ನು ಒದಗಿಸುವ, ಎತ್ತಿ ನಿಲ್ಲಿಸುವ, ಕೆಡಿಸುವ ಮೂರು ಧಾತುಗಳು (ಅಥವಾ ದೋಷಗಳು) ವಾತ, ಪಿತ್ತ, ಕಫ ಎಂಬುವೆಂದೂ ಆಯುರ್ವೇದದವರು ನಂಬುತ್ತಾರೆ. ನಮ್ಮ ಶರೀರದಂತೆ ಗಿಡಮರಗಳೂ ಪಾಂಚಭೌತಿಕವಾದುವೇ. ಆದುದರಿಂದಲೇ ರೋಗ ನಿವಾರಣೆಗೆ ಅವುಗಳ ನೆರವು ಸುಲಭವಾದುದೆಂದೂ ಸುಕರವಾದುದೆಂದೂ ಹೇಳುತ್ತಾರೆ.

ಈ ನಿಲುವು ದೇಶದಲ್ಲಿ ಬೆಳೆದಂತೆ ಔಷಧಿಗಳ (ಎಂದರೆ ಚಿಕಿತ್ಸೆಗೆ ಬರುವ ಗಿಡಮರಗಳ) ನಿಘಂಟುಗಳು ಸಿದ್ಧವಾಗ ತೊಡಗಿದುವು. ಆಯುರ್ವೇದ ಕಲಿಯುವವರು ಈ ಗಿಡ ಮರ ಗಳ ಪರಿಚಯವನ್ನು ಚೆನ್ನಾಗಿ ಪಡೆದುಕೊಂಡು, ಅಭ್ಯಾಸ ಮಾಡುವಾಗ ಆಯಾ ಗಿಡ - ಮರಗಳ ಉಪಯುಕ್ತ ಭಾಗ ಗಳನ್ನು ಕಾಡುಮೇಡುಗಳಿಂದ ಸಂಗ್ರಹಿಸಿ, ತಾವೇ ಮದ್ದುಗಳನ್ನು ಸಿದ್ಧಪಡಿಸಿಕೊಳ್ಳುತ್ತಿದ್ದರು. ಇದು ಆಯುರ್ವೇದದ ಮುಖ್ಯ ವಿಚಾರ. ವೈದ್ಯನು ರೋಗಿಗೆ ಬೇಕಾದ ಮದ್ದನ್ನು ತನ್ನ ಕೈಯಿಂದಲೇ ಮಾಡಿಕೊಡುತ್ತಿದ್ದನು. ಅವನ ಮನೆಯಲ್ಲಿ ಇದಕ್ಕೆ ಸೌಲಭ್ಯವಿರುತ್ತಿತ್ತು. ಈಗಿನಂತೆ ಸಿದ್ಧವಾದ ಔಷಧಿ ಗಳನ್ನು ಮಾರುಕಟ್ಟೆಯಲ್ಲಿ ಕೊಂಡುಕೊಳ್ಳುವುದು ಬಳಕೆಯಲ್ಲಿ ಇರಲಿಲ್ಲ.

ಇನ್ನೂ ಒಂದು ವಿಚಾರವೆಂದರೆ, ಆಯುರ್ವೇದವನ್ನು ಕಲಿ ಯುವವರು ಅದನ್ನು ಶಾಲೆಯಲ್ಲಿ ಕಲಿಯದೆ ಹೆಸರಾಂತ ವೈದ್ಯ ನೊಬ್ಬನ ಬಳಿಯೇ ಉಳಿದುಕೊಂಡು ಅವನಿಂದ ಚಿಕಿತ್ಸೆಯ ರಹಸ್ಯಗಳನ್ನೆಲ್ಲ ಅರಿತುಕೊಳ್ಳುತ್ತಿದ್ದರು. ರೋಗದ ಹುಟ್ಟು ಬೆಳವಣಿಗೆ, ಕುರುಹುಗಳು, ಮದ್ದಿನ ಉಪಯೋಗ, ಸ್ವರೂಪ, ಗುಣ, ಸಿದ್ಧತೆ, ಮತ್ತು ಚಿಕಿತ್ಸೆಯ ಪ್ರಾಯೋಗಿಕ ವಿವರಗಳು ಎಲ್ಲವನ್ನೂ ಗುರುವು ಹಲವಾರು ವರ್ಷಕಾಲ ಶಿಷ್ಯರಿಗೆ ಸಮಯ ಬಿದ್ದಂತೆ ತಿಳಿಸುತ್ತಿದ್ದನು ; ನಡುನಡುವೆ ಶಾಸ್ತ್ರಗ್ರಂಥಗಳನ್ನೂ ಕಲಿಸುತ್ತಿದ್ದನು. ದೇಶದಲ್ಲೆಲ್ಲ ಆಯುರ್ವೇದ ವಿದ್ಯೆ ಹೀಗೆ ಸಮರ್ಥರಾದ ವೈದ್ಯರನ್ನು ಆಶ್ರಯಿಸಿದ್ದಿತು ; ಶಾಲೆಗಳಲ್ಲಿ ವೈದ್ಯವಿದ್ಯೆಯನ್ನು ಕಲಿಸಬೇಕಾದ ಅಗತ್ಯವಿರಲಿಲ್ಲ. ಕನ್ನಡ ನಾಡಿನಲ್ಲೂ ಆಯುರ್ವೇದ ಬೆಳೆದದ್ದು ಹೀಗೆಯೇ. ಆಯು ರ್ವೇದ ಪಾಠಶಾಲೆಗಳು ಎದ್ದುಕೊಂಡುದೆಲ್ಲ ಈಚೆಗೆ.

ಮೊದಲ ಬೆಳೆ

ಕನ್ನಡನಾಡನ್ನು ಆಳಿದ ಅರಸೊತ್ತಿಗೆಯಲ್ಲಿ ಮೊದಲು ನಮ್ಮ ಗಮನವನ್ನು ಸೆಳೆಯುವುದು ಶಾತವಾಹನರದ್ದು. ಕ್ರಿಸ್ತ ಯುಗದ ಮೊದಲ ನೂರು ವರ್ಷಗಳಲ್ಲೇ ಇವರ ಆಳ್ವಿಕೆ ಈಕಡೆ ಸಾಗಿದ್ದಿತು. ಆಗ ಅವರ ಒಲವನ್ನು ಪಡೆದುಕೊಂಡ ನಾಗಾರ್ಜುನ ಆಯುರ್ವೇದದ ಇತಿಹಾಸದಲ್ಲಿ ಆದ್ಯನೆನ್ನಬಹುದು. ನಾಗಾರ್ಜುನನು ಆಂಧ್ರಪ್ರದೇಶದಲ್ಲಿರುವ ಶ್ರೀಶೈಲದಲ್ಲಿದ್ದವನು. ಬೌದ್ಧಸಂಪ್ರದಾಯಕ್ಕೆ ಸೇರಿದ ಭಿಕ್ಷು. ರಸವಾದದಲ್ಲಿ ಅವನದು ಎತ್ತಿದ ಕೈ. ಅವನ ಪ್ರಭಾವ ಈ ನಾಡಿನ ವೈದ್ಯರ ಮೇಲೆ ಎಷ್ಟು ಬಿದ್ದಿತೋ ಹೇಳುವುದು ಕಷ್ಟ. ರಸಶಾಸ್ತ್ರವನ್ನು ಕುರಿತೇನೋ ಪ್ರಾಚೀನ ಕನ್ನಡ ಪುಸ್ತಕಗಳು ಹಲವಿವೆ. ಆದರೆ ಇದರ ಪರಂಪರೆ ಅಷ್ಟಾಗಿ ಬೆಳೆಯಲಿಲ್ಲವಾದರೂ ಅದರ ಕುರುಹುಗಳು ಉಳಿದು ಕೊಂಡುವು. ಮುಂದೆ ಕನ್ನಡನಾಡಿನಲ್ಲಿ ಆಯುರ್ವೇದವನ್ನು ಬೆಳೆಸಿದವರು ಜೈನರು, ಅವರಲ್ಲೂ ಯತಿಗಳು. ಕ್ರಿಸ್ತಾಬ್ದ ಮೂರು ನೂರು ವರ್ಷಗಳಿಂದ ನೂರಾರು ವರ್ಷಗಳವರೆಗೆ ಜೈನಧರ್ಮಕ್ಕೆ ಅರಸರ, ಅಧಿಕಾರಿಗಳ ಒತ್ತಾಸೆಯಿದ್ದಿತು. ಅಂಜಿದವರಿಗೆ ಆಸರೆಯನ್ನೂ, ಹಸಿದವರಿಗೆ ಅನ್ನವನ್ನೂ, ತಿಳಿಯದವರಿಗೆ ವಿದ್ಯೆಯನ್ನೂ, ರೋಗದಿಂದ ಬಳಲಿದವರಿಗೆ ಮದ್ದನ್ನೂ ನೀಡಬೇಕೆನ್ನುವುದು ಈ ಧರ್ಮದಲ್ಲಿ ಕಟ್ಟು. ಇದರಂತೆ ನೂರಾರು ಜೈನಯತಿಗಳೂ ಪಂಡಿತರೂ ಶ್ರೀಮಂತರೂ ವೈದ್ಯರೂ ತಂತಮ್ಮ ದಾನವನ್ನು ನೀಡಲು ಮುಂದಾದರು. ಸಮಂತಭದ್ರ, ಪೂಜ್ಯಪಾದ, ಉಗ್ರಾದಿತ್ಯ, ಕುಮುದೇಂದು, ಕೀರ್ತಿವರ್ಮ, ದೇವೇಂದ್ರಮುನಿ ಮೊದಲಾದ ಹಿರಿಯರು ವೈದ್ಯವನ್ನು ಕುರಿತು ಗ್ರಂಥಗಳನ್ನು ಬರೆದು ಶಾಸ್ತ್ರದಾನ ಮತ್ತು ಭೈಷಜ್ಯದಾನಗಳೆರಡನ್ನೂ ಒಟ್ಟಿಗೆ ಸಾಧಿಸಿದರು.

ಕ್ರಿಸ್ತಯುಗದ ಮೂರನೆಯ ಶತಮಾನದಿಂದ ಹತ್ತು-ಹನ್ನೊಂದನೆಯ ಶತಮಾನಗಳವರೆಗೆ ವೈದ್ಯಕ್ಷೇತ್ರದಲ್ಲಿ ಜೈನರ ಪ್ರಭಾವವೇ ಹೆಚ್ಚಾಗಿದ್ದಿತು. ಈ ಕಾಲದಲ್ಲಿ ಆಯುರ್ವೇದ ಚಿಕಿತ್ಸೆಗೆ ಬಳಸುವ ಮದ್ದುಗಳಲ್ಲಿ ಮಾಂಸವನ್ನೂ ಮದ್ಯವನ್ನೂ ಸೇರಿಸಬಾರದೆಂಬ ಕಟ್ಟಳೆ ಮೂಡಿಬಂದಿತು. ಇದು ಇಂದಿನ ವರೆಗೂ ಉಳಿದುಕೊಂಡು ಬಂದಿದೆ. ಶ್ರದ್ಧಾಳುಗಳಾದ ಜೈನರು ಮಧು (ಎಂದರೆ ಜೇನುತುಪ್ಪ) ವನ್ನು ಬಳಸಲು ಒಪ್ಪುವುದಿಲ್ಲ. ಆದರೆ ಆಯುರ್ವೇದದ ಮದ್ದುಗಳ ಬಳಕೆಯಲ್ಲಿ ಜೇನುತುಪ್ಪ ವನ್ನು ಬಿಡಲು ಸಾಧ್ಯವಿಲ್ಲದೆ ಹೋಯಿತು.

ಕರ್ನಾಟಕದಲ್ಲಿ ಸಿದ್ಧವಾದ ಮೊಟ್ಟಮೊದಲ ಸ್ವತಂತ್ರ ಆಯುರ್ವೇದ ಗ್ರಂಥವೆಂದರೆ ಉಗ್ರಾದಿತ್ಯನ "ಕಲ್ಯಾಣಕಾರಕ" (ಕ್ರಿಸ್ತಾಬ್ದ ಒಂಬತ್ತನೆಯ ಶತಮಾನ). ಉಗ್ರಾದಿತ್ಯನು ರಾಷ್ಟ್ರಕೂಟ ರಾಜ ನೃಪತುಂಗನ ಕಾಲದಲ್ಲಿದ್ದ ಜೈನಸಂನ್ಯಾಸಿ; ರಾಜನು ಇವನ ಪಾಂಡಿತ್ಯವನ್ನೂ ವೈದ್ಯಪ್ರೌಢಿಮೆಯನ್ನೂ ಮೆಚ್ಚಿಕೊಂಡಿದ್ದನು. 'ಕಲ್ಯಾಣಕಾರಕ'ವೆಂಬುದು ಸಂಸ್ಕೃತ ಭಾಷೆಯಲ್ಲಿರುವ ವೈದ್ಯಗ್ರಂಥ. ಇದರಲ್ಲಿ ಗಿಡಮರಗಳಿಂದ ಮಾಡಿಕೊಳ್ಳುವ ಮದ್ದನ್ನು (ಇದನ್ನು ಕಾಷ್ಠೌಷಧವೆನ್ನುತ್ತಾರೆ) ಹೆಚ್ಚಾಗಿ ಹೇಳಿದೆ. ವೈದ್ಯನಾದವನು ಪಂಡಿತನಾಗಿರಬೇಕು, ಪ್ರಯೋಗಗಳನ್ನು ಚೆನ್ನಾಗಿ ತಿಳಿದಿರಬೇಕು, ಚುರುಕಾಗಿರಬೇಕು, ಧೀರನಾಗಿರಬೇಕು, ಧರ್ಮಿಷ್ಠನಾಗಿರಬೇಕು ಎಂದು ಉಗ್ರಾದಿತ್ಯನ ಒಕ್ಕಣೆ.

ಕನ್ನಡ ಭಾಷೆಯಲ್ಲೇ ಸಿದ್ಧವಾದ ಮೊಟ್ಟಮೊದಲ ಗ್ರಂಥ 'ಲೋಕೋಪಕಾರ'ವೆಂಬುದು (ಕ್ರಿಸ್ತಾಬ್ದ ಹನ್ನೊಂದನೆ ಶತಮಾನದ ಮೊದಲ ಭಾಗ). ಇದನ್ನು ಬರೆದ ಚಾವುಂಡ ರಾಯನು ಚಾಳುಕ್ಯಮನೆತನದ ದೊರೆ ಎರಡನೆಯ ಜಯ

ಸಿಂಹನ ಆಸ್ಥಾನದಲ್ಲಿದ್ದ ಬ್ರಾಹ್ಮಣ ಪಂಡಿತ. ಈ ಗ್ರಂಥ ಒಂದು ಸಣ್ಣ ವಿಶ್ವಕೋಶವೇ ಎನ್ನಬಹುದು. ಮನೆಯನ್ನು ಕಟ್ಟುವುದು, ಊರನ್ನು ವ್ಯವಸ್ಥೆ ಮಾಡುವುದು, ಭೂಮಿಯಿಂದ ನೀರನ್ನು ತೆಗೆಯುವುದು, ಶಕುನ, ಜ್ಯೋತಿಷ್ಯ, ಅಡುಗೆ ಮಾಡುವ ಕಲೆ, ಸಂಸ್ಕಾರಗಳು, ವೈದ್ಯ ಎಲ್ಲವೂ ಇಲ್ಲಿ ಬಂದಿದೆ. ವೈದ್ಯದಲ್ಲಿ ಮನುಷ್ಯರ, ದನಕರುಗಳ, ಆನೆ ಕುದುರೆಗಳ, ಮರಗಿಡಗಳ, ರೋಗಗಳಿಗೆಲ್ಲ ಚಿಕಿತ್ಸೆಯನ್ನು ಹೇಳಿದೆ.

ಈ ಗ್ರಂಥದಲ್ಲಿ ಹಲವು ವಿಚಾರಗಳಿದ್ದು ವೈದ್ಯವೂ ಒಂದಾಗಿ ಸೇರಿದೆಯೆಂದರೆ, ವೈದ್ಯವನ್ನೇ ಕುರಿತು ಕನ್ನಡದಲ್ಲಿ ಸಿದ್ಧವಾದ ಗ್ರಂಥಗಳಲ್ಲಿ ಮೊದಲನೆಯದು 'ಕರ್ನಾಟಕ ಕಲ್ಯಾಣಕಾರಕ'ವೆಂಬುದು. ಇದನ್ನು ಬರೆದ ಜಗದ್ದಲಸೋಮನಾಥನು ಜೈನಕವಿ; ಕ್ರಿಸ್ತಾಬ್ದ 1150ರ ಸುಮಾರಿಗೆ ಬದುಕಿದ್ದವನು. ಪೂಜ್ಯಪಾದನು ಸಂಸ್ಕೃತದಲ್ಲಿ ಬರೆದಿದ್ದ 'ಕಲ್ಯಾಣಕಾರಕ'ವನ್ನು ಕನ್ನಡ ಭಾಷೆಯಲ್ಲಿ ಹೊರತರುವ ಪ್ರಯತ್ನ ಇದು; ಹೀಗೆ ಹೊರತರುವಾಗ ಹೊಸ ವಿಚಾರಗಳನ್ನು ಅಳವಡಿಸಿಕೊಂಡಿರುವುದು ಸ್ವಾರಸ್ಯ. ಇದು ಬರಿಯ ಭಾಷಾಂತರವೆನ್ನುವ ಹಾಗಿಲ್ಲ; ಹೆಚ್ಚೂ ಕಡಮೆ ಸ್ವತಂತ್ರ ಗ್ರಂಥವೆಂದೇ ಹೇಳಬಹುದು, ಆದರೆ ಜಾಡು ಪೂಜ್ಯಪಾದನದ್ದೇ. ಕಾವ್ಯಶೈಲಿಯಲ್ಲಿ ಸಿದ್ಧವಾಗಿರುವ ಈ ಗ್ರಂಥದಲ್ಲಿ ಮದ್ದುಗಳು ಮಾತ್ರವಲ್ಲದೆ ರೋಗಚಿಕಿತ್ಸೆಗೆ ನೆರವಾಗುವ ಮಂತ್ರ, ಯಂತ್ರಗಳನ್ನೂ ಹೇಳಿದೆ. ಈ ಕಾಲಕ್ಕೆ ನಾಡೀಪರೀಕ್ಷೆಯು ವಿಶೇಷವಾಗಿ ಬಳಕೆಗೆ ಬಂದಂತೆ ತೋರುತ್ತದೆ. ರೇವಣಸಿದ್ಧನೆಂಬುವನು ಸಿದ್ಧಪಡಿಸಿರುವ ಗ್ರಂಥವೊಂದರಲ್ಲಿ ನಾಡೀಜ್ಞಾನವನ್ನು ಕುರಿತ ಅಧ್ಯಾಯವೊಂದಿದೆ. ಇದರ ರಚನೆಯೂ ಮೇಲೆ ಹೇಳಿದ 'ಕಲ್ಯಾಣಕಾರಕ'ದ ಸಮಯದಲ್ಲೇ ಆಯಿತು. 'ರೇವಣಸಿದ್ಧಕಲ್ಪದಲ್ಲಿಯೂ'ಕಲ್ಯಾಣ

ಕಾರಕ'ದಲ್ಲಿರುವಂತೆ ಯಂತ್ರ, ಮಂತ್ರಗಳ ಬಳಕೆಯನ್ನು ಹೇಳಿದೆ.

ದೇವಗಿರಿಯ ಅರಸನ ಅಮಾತ್ಯನಾಗಿ, ವಿದ್ವಾಂಸರಿಗೆ ಆಶ್ರಯವನ್ನಿತ್ತು, ಜ್ಞಾನಪ್ರಸಾರಕ್ಕೆ ನೆರವಾದ ಹೇಮಾದ್ರಿ (ಕ್ರಿಸ್ತಾಬ್ದ 1260-1309) ವಾಗ್ಭಟನ ಪರಂಪರೆಯನ್ನು ಇಲ್ಲಿ ನೆಲೆಗಾಣಿಸಿದವನು. ಇವನ ಹೆಸರು 'ಚತುರ್ವರ್ಗಚಿಂತಾಮಣಿ' ಯಿಂದ ಪ್ರಸಿದ್ಧವಾಗಿದೆ. ಧರ್ಮಾಚರಣೆಯನ್ನು ಕುರಿತ ಗ್ರಂಥ ಇದು. ಧರ್ಮಾಚರಣೆಗೆ ಶರೀರದ ಆರೋಗ್ಯ ಅತ್ಯಗತ್ಯವೆಂದು ಮನಗಂಡು ಹೇಮಾದ್ರಿಯು ವಾಗ್ಭಟನ 'ಅಷ್ಟಾಂಗ ಹೃದಯ'ಕ್ಕೆ ತಾನೇ ವ್ಯಾಖ್ಯಾನವೊಂದನ್ನು ಬರೆಯತೊಡಗಿದ. ಇದಕ್ಕೆ 'ಆಯುರ್ವೇದ ರಸಾಯನ'ವೆಂದು ಹೆಸರು; ಸಂಸ್ಕೃತದಲ್ಲಿದೆ. ಮೂಲದ ಎಲ್ಲ ಸ್ಥಾನಗಳಿಗೂ ವ್ಯಾಖ್ಯಾನವು ಮುಗಿಯಲಿಲ್ಲ ವೆಂದು ತೋರುತ್ತದೆ; ಉಪಲಬ್ಧವೇನೋ ಇಲ್ಲ. ಇವನ ನೆರ ವನ್ನು ಪಡೆದುಕೊಂಡ ಬೋಪದೇವ ಹಲವಾರು ಶಾಸ್ತ್ರ ಪ್ರಕಾರಗಳಲ್ಲಿ ಹಿರಿಯ ವ್ಯಕ್ತಿ. ಇವನ ತಂದೆ ಕೇಶವಭಟ್ಟನು ವೃತ್ತಿಯಿಂದ ವೈದ್ಯ; ವೈದ್ಯವನ್ನು ಕುರಿತು 'ಸಿದ್ಧಮಂತ್ರ'ವೆಂಬ ಸಣ್ಣ ಸಂಸ್ಕೃತ ಗ್ರಂಥವನ್ನು ಕಾವ್ಯಶೈಲಿಯಲ್ಲಿ ಬರೆದವನು. ಇದಕ್ಕೆ ಮಗ ಬೋಪದೇವನು 'ಪ್ರಕಾಶ'ವೆಂಬ ವ್ಯಾಖ್ಯಾನವನ್ನು ಬರೆದಿದ್ದಾನೆ. ಹಾಗೆಯೇ ಆಯುರ್ವೇದಕ್ಕೆ ಆಕರ ಗ್ರಂಥವೆಂದು ಹೆಸರಾದ 'ಶಾರ್ಙ್ಗಧರ ಸಂಹಿತೆ'ಗೂ ಒಂದು ವ್ಯಾಖ್ಯಾನವನ್ನು ಬರೆದಿದ್ದಾನೆ. ಆದರೆ ಈಗ ಇದು ಸಿಗುವುದಿಲ್ಲ. ಈ ವ್ಯಾಖ್ಯಾನ ಗಳಲ್ಲದೆ ನೂರು ಶ್ಲೋಕಗಳಲ್ಲಿ ವೈದ್ಯರಿಗೆ ನೆರವಾಗುವ ಮತ್ತು ಹಲವು ಯೋಗಗಳನ್ನು ಹೇಳುವ 'ವೈದ್ಯಶತಕ'ವೆಂಬ ಕಾವ್ಯ ಗ್ರಂಥವನ್ನೂ ರಚಿಸಿದ್ದಾನೆ.

ಇವೆಲ್ಲ ಬಹುಮಟ್ಟಿಗೆ ಸಂಸ್ಕೃತದಲ್ಲೇ ಇರುವ ಗ್ರಂಥ

ಗಳು. ಆಯುರ್ವೇದವು ಕೇವಲ ಶಾಸ್ತ್ರನಿಷ್ಠವಾಗಿ ಇರುತ್ತಿದ್ದುದರಿಂದ, ವೈದ್ಯರು ತಮ್ಮ ಅನುಭವ ವೈದ್ಯವನ್ನೂ ಈ ಶಾಸ್ತ್ರದ ಚೌಕಟ್ಟಿನಲ್ಲೇ ಕಾಣಿಸುವ ಪ್ರಯತ್ನವನ್ನು ಮಾಡುತ್ತಿದ್ದರು. ಆಯುರ್ವೇದದಲ್ಲಿ ಪ್ರೌಢಿಮೆ ಪಡೆಯುವ ಮೊದಲು ಸಾಹಿತ್ಯದಲ್ಲಿ ಸೌಲಭ್ಯ ಇರಬೇಕೆಂಬ ಕಟ್ಟು ಇದ್ದಿತು. ಮೇಲೆ ಕಾಣಿಸಿದ ಗ್ರಂಥಗಳು ಪ್ರಚಾರಕ್ಕೆಂದೇ ಸಿದ್ಧವಾದುವು. ಅಭ್ಯಾಸ ಮಾಡುವ ವೈದ್ಯರು ತಮ್ಮ ಉಪಯೋಗಕ್ಕೆಂದು ಟಿಪ್ಪಣಿಗಳನ್ನು ಮಾಡಿಕೊಳ್ಳುತ್ತಿದ್ದುದೂ ಉಂಟು; ಇಂಥವು ಕನ್ನಡಭಾಷೆಯಲ್ಲೋ ತೆಲುಗುಭಾಷೆಯಲ್ಲೋ ಮೂಡಿಕೊಂಡಿವೆ. ಈ ತೆರನಾದ ಬರಹಗಳು ಹಲವರ ಮನೆಗಳಲ್ಲಿ ಕಾಣಸಿಗುತ್ತವೆ.

ಮೈಲಿಗಲ್ಲುಗಳು

ಹದಿಮೂರು-ಹದಿನಾಲ್ಕನೆಯ ಶತಮಾನಗಳಿಂದ ಆಯುರ್ವೇದವನ್ನು ಕುರಿತು ಗ್ರಂಥಗಳು ಸಿದ್ಧವಾದುವು. ಹದಿನೆಂಟನೆಯ ಶತಮಾನದ ಮೊದಲಭಾಗದವರೆಗೂ ಇದು ಸಾಗಿತು. ಬಹುಮಟ್ಟಿಗೆ ವಾಗ್ಭಟನ (ಕನ್ನಡದಲ್ಲಿ ಬಾಹಟನ) ಸಂಪ್ರದಾಯವನ್ನೇ ಅವಲಂಬಿಸಿ ಈ ಗ್ರಂಥಗಳು ಸಿದ್ಧವಾದುವು. ವಾಗ್ಭಟನ ಪದ್ಧತಿಗೆ ಅಲ್ಲಲ್ಲಿ ಮೂಡಿಕೊಳ್ಳುತ್ತಿದ್ದ ಅಪವಾದಗಳನ್ನು ದೂರಮಾಡಲೆಂದು ನರಹರಿಭಟ್ಟನು ಹದಿನಾಲ್ಕನೆಯ ಶತಮಾನದಲ್ಲಿ ಬರೆದ 'ವಾಗ್ಭಟ-ಮಂಡನ', ಅದೇ ಸಮಯದಲ್ಲಿ ಉದಯಾದಿತ್ಯಭಟ್ಟನು ವಾಗ್ಭಟನ ಅಷ್ಟಾಂಗ-ಸಂಗ್ರಹಕ್ಕೆ ಬರೆದ ಟೀಕೆ, ಎರಡು ಶತಕಗಳನಂತರ ಅದನ್ನೇ ಅವಲಂಬಿಸಿಕೊಂಡು ಶ್ರೀಕಂಠನಂದಿಯೆಂಬುವನು ಬರೆದ 'ಪರ್ಯಾಯ-ಮಂಜರಿ' ಮತ್ತು ವಾಗ್ಭಟನ ಸೂತ್ರ

ಸ್ಥಾನದ ಜಾಡನ್ನು ಹಿಡಿದು ಸಿದ್ಧವಾದ 'ವೈದ್ಯಚಿಕಿತ್ಸಾಮೃತ' ಇವೆಲ್ಲ ಕನ್ನಡಿಗರು ವಾಗ್ಭಟಪ್ರಸ್ಥಾನದ ಹಿರಿಮೆಗೆ ಕೊಟ್ಟ ಕೊಡುಗೆಗಳು.

ಮೊದಮೊದಲು ಸಂಸ್ಕೃತದಲ್ಲೂ ಬರುಬರುತ್ತ ಕನ್ನಡ ದಲ್ಲೂ ಆಯುರ್ವೇದದ ಆಕರಗ್ರಂಥಗಳು ಮೈದಳೆದುವು. ಮೂಲಿಕೆಗಳನ್ನು ಪಟ್ಟಿಮಾಡಿ ಅವುಗಳ ಉಪಯೋಗವನ್ನು ತಿಳಿಯಪಡಿಸುವ ನಿಘಂಟುಗಳೂ, ಶಾಸ್ತ್ರ ಗ್ರಂಥಗಳ ತಿರುಳನ್ನು ಕನ್ನಡದಲ್ಲಿ ಸೆರೆಹಿಡಿದು ಗದ್ಯಪದ್ಯಗಳಲ್ಲಿ ಮೂಡಿಸಿದ ಗ್ರಂಥ ಗಳೂ, ಅನುಭವದಿಂದ ಗೊತ್ತುಮಾಡಿಕೊಂಡ ಔಷಧಿಗಳ, ಯೋಗಗಳ ವಿವರಗಳನ್ನು ಒಳಗೊಂಡ ಪುಸ್ತಕಗಳೂ ಹಲವಾರು ಕಾಣಿಸಿಕೊಂಡುವು. ಆದರೆ ಬಹುಮಟ್ಟಿಗೆ ಇವು ಪ್ರಚಾರಕ್ಕೆ ಬರದೆ ಅಲ್ಲಲ್ಲಿ ಓಲೆಗರಿ-ಕಟ್ಟುಗಳಲ್ಲೇ ಮುದುಡಿಕೊಂಡು ಕುಳಿತವು. ಈಗಲೂ ಹಾಗೆಯೇ ಕುಳಿತಿವೆಯೆನ್ನಿ!

ಹೀಗೆ ಮೈದಳೆದ ನೂರಾರು ವೈದ್ಯಪುಸ್ತಕಗಳಲ್ಲಿ ಕೆಲವು ಮೈಲಿಗಲ್ಲುಗಳೆಂದು ಹೇಳಬಹುದು. ಯಳಂದೂರು ಚೆನ್ನರಾಜನ ಹೆಸರಿನಿಂದ ಹೊರಬಂದ 'ವೈದ್ಯಸಾರಸಂಗ್ರಹ' (1570ರ ಸುಮಾರು) ನಾಡಿನಲ್ಲೆಲ್ಲ ಹೆಸರಾಯಿತು. ಎಲ್ಲ ವೈದ್ಯರೂ ಇದನ್ನು ಮೆಚ್ಚಿಕೊಂಡು ಅದರ ನೆರವನ್ನು ಪಡೆದುಕೊಳ್ಳ ತೊಡಗಿದರು. ಹಾಗೆಯೇ ಸುಮಾರು ಒಂದುನೂರು ವರ್ಷಗಳ ನಂತರ ಬಿಜಾಪುರದ ರಾಜವೈದ್ಯ ಲೋಲಂಬರಾಜನು ಬರೆದ 'ಸದ್‌ವೈದ್ಯ-ಜೀವನ' ವೈದ್ಯರಿಗೂ ರಸಿಕರಿಗೂ ಅಚ್ಚುಮೆಚ್ಚಾ ಯಿತು. ಇದು 'ಲೋಲಂಬರಾಜೀಯ'ವೆಂದೇ ಹೆಸರಾಗಿದೆ. ಕನ್ನಡನಾಡಿನಲ್ಲಿ ಮಾತ್ರವಲ್ಲದೆ ಇಡೀ ಭಾರತದೇಶದಲ್ಲಿ ಇದರ ಹಿರಿಮೆ ಹರಡಿತು. ಹಲವಾರು ಇತರ ಪ್ರಾಂತ್ಯಗಳಲ್ಲೂ ವೈದ್ಯರು

ಇದನ್ನೇ ಬಳಸುತ್ತ ಬಂದರು. ಇದರ ಮೇಲೆ ವ್ಯಾಖ್ಯಾನಗಳೂ ಹಲವಾರು ಮೈದಳೆದುವು.

ಈ ಗ್ರಂಥ ಹೊರಬರುವ ಸಮಯದಲ್ಲೇ, ಸಿದ್ಧವಾದ ಮತ್ತೊಂದು ಗ್ರಂಥ ಹೀಗೆಯೇ ಮೇಲೆದ್ದು ನಿಂತಿತು. ಇದು 'ಬಸವರಾಜೀಯ'ವೆಂದು ಹೆಸರಾಗಿದೆ. ಧಾರವಾಡ ಕಡೆಯ ಕೊಟ್ಟೂರು ಬಸವರಾಜನೆಂಬುವನು ಬರೆದ ಈ ಗ್ರಂಥ ಕಾಯ ಚಿಕಿತ್ಸೆಯನ್ನೇ ಕುರಿತದ್ದು. ಇದು ಕನ್ನಡದೇಶದಲ್ಲೂ ತೆಲುಗು ದೇಶದಲ್ಲೂ ತುಂಬ ಜನಪ್ರಿಯವಾಯಿತು; ವೈದ್ಯರಿಗೆ ಊರು ಗೋಲಾಯಿತು. ಈವರೆಗೆ ಹೇಳಿದ ಗ್ರಂಥಗಳೆಲ್ಲ ಸಂಸ್ಕೃತದಲ್ಲೇ ಸಿದ್ಧವಾದುವು. ಆದರೆ ದಳವಾಯಿ ವೀರರಾಜನು 1720ರ ಸುಮಾರಿಗೆ ಬರೆದ 'ವೈದ್ಯಸಂಹಿತಾಸಾರಾರ್ಣವ'ವೆಂಬುದು ಕನ್ನಡ, ತೆಲುಗು ಎರಡೂ ಭಾಷೆಗಳಲ್ಲಿದೆ. ಇದನ್ನು ಬರೆದವನು ಮೈಸೂರು ಅರಸೊತ್ತಿಗೆಯ ನೆಂಟನಾಗಿದ್ದುದರಿಂದ ಗ್ರಂಥಕ್ಕೆ ಹೆಚ್ಚು ಪ್ರಚಾರ ದೊರೆಯಿತು. ಇವನ ಮಗ ನಂಜರಾಜನೂ ಆಯುರ್ವೇದದಲ್ಲಿ ಪರಿಣತನಾಗಿದ್ದು 'ವೈದ್ಯಸಾರಸಂಗ್ರಹ'ವೆಂಬ ಗ್ರಂಥವನ್ನು ಬರೆದಿದ್ದಾನೆ. ನಷ್ಟವಾದ, ಪ್ರಚುರವಲ್ಲದ ಹಲ ವಾರು ಹಳೆಯ ಗ್ರಂಥಗಳಿಂದ ವಿವರಗಳನ್ನು ಇಲ್ಲಿ ಸಂಗ್ರಹಿಸಿ ದ್ದಾನೆ. ಮೂಲ ಸಂಸ್ಕೃತ ಶ್ಲೋಕಗಳಿಗೆ ಕನ್ನಡದ ವಿವರಣೆ ಗಳನ್ನು ಒದಗಿಸಿದ್ದಾನೆ. ಇವೆರಡೂ ಕನ್ನಡನಾಡಿನ ಆಯು ರ್ವೇದ ಕ್ಷೇತ್ರದಲ್ಲಿ ರಾಜಕೃತಿಗಳೇ.

ಈ ಅವಧಿಯಲ್ಲಿ ಮೈದಳೆದ ಆಯುರ್ವೇದ ಗ್ರಂಥಗಳಲ್ಲಿ ಯಂತ್ರ ಮಂತ್ರತಂತ್ರಗಳ ಗೀಳು ಸುಮಾರಾಗಿ ಇದ್ದುದು ಕಾಣುತ್ತದೆ. ಮಂಗರಾಜನ 'ಖಗೇಂದ್ರಮಣಿದರ್ಪಣ' (ಹದಿ ನೈದನೆಯ ಶತಮಾನದ ಕೃತಿ) ಅಥವಾ 'ಮೃತಸಂಜೀವಿನಿ' ಎಂಬುದು ಮುಖ್ಯವಾಗಿ ವಿಷವೈದ್ಯವನ್ನು ಕುರಿತದ್ದು, ಕನ್ನಡ

ದಲ್ಲೇ ಇದೆ. ಇದರಲ್ಲಿ ಹಲವಾರು ಬಗೆಯ ವಿಷಗಳನ್ನು ತೊಲಗಿಸಲು ಮಣಿಮಂತ್ರ ಔಷಧಿಗಳ ಬಳಕೆಯನ್ನು ವಿವರಿಸಿದ್ದಾನೆ; ಪೂಜೆ ಪುನಸ್ಕಾರಗಳನ್ನೂ ಯಂತ್ರಧಾರಣೆಯನ್ನೂ ರಸವೈದ್ಯವನ್ನೂ ಹೇಳಿದ್ದಾನೆ. ಅದೇ ಕಾಲದ 'ವೈದ್ಯಾಮೃತ'ವೆಂಬ ಗ್ರಂಥದಲ್ಲೂ ರಸವೈದ್ಯವನ್ನೂ ಮಂತ್ರಯಂತ್ರಗಳ ಬಳಕೆಯನ್ನೂ ಹೇಳಿದೆ. ಅದನ್ನು ಬರೆದ ಶ್ರೀಧರದೇವನೂ ಮಂಗರಾಜನಂತೆಯೇ ಜೈನ. ಈ ಪುಸ್ತಕದ ಬಹುಭಾಗ ಕನ್ನಡದಲ್ಲಿದೆ; ಮೊದಲು ಸಂಸ್ಕೃತವನ್ನು ಬಳಸಿದ್ದಾನೆ. 'ಲೋಲಂಬರಾಜೀಯ'ದಲ್ಲೂ ರಸೌಷಧಿಗಳ ಪ್ರಸ್ತಾಪವಿದೆ. ಕೃಷ್ಣಾರ್ಯನ 'ಸಿದ್ಧಯೋಗಸಮುಚ್ಚಯ', ಲೇಖಕ ಯಾರೆಂದು ತಿಳಿಯದ 'ರಸವಾದ', ಅಂಥದೇ 'ವೈದ್ಯನಿಘಂಟು' ಮೊದಲಾದ ಹಲವು ಗ್ರಂಥಗಳಲ್ಲಿ ಕೂಡ ಈ ವಿವರವನ್ನು ಕಾಣಬಹುದು.

ಕನ್ನಡನಾಡಿನಲ್ಲಿ ರಸವೈದ್ಯದ ಬಳಕೆ ತುಂಬ ಹಿಂದಿನದು. ನಾಗಾರ್ಜುನನ ಪ್ರಭಾವದಿಂದ ತೋರಿಕೊಂಡಿತೋ ಏನೋ. ಈ ವೈದ್ಯದ ಉಗಮ ಉತ್ತರದೇಶದಲ್ಲಿಯೇ ಆಯಿತಾದರೂ ಕನ್ನಡ ನಾಡಿನಲ್ಲಿ ಬೆಳೆದು ಹದಿನಾಲ್ಕನೆಯ ಶತಮಾನದ ವೇಳೆಗೆ ದರ್ಶನದ ನೆಲೆಯನ್ನು ಮುಟ್ಟಿತು. ಕನ್ನಡನಾಡಿನ ಕೊಡುಗೆಯೇ ಆದ 'ಸರ್ವದರ್ಶನ ಸಂಗ್ರಹ' ದಲ್ಲಿ 'ರಸೇಶ್ವರ ದರ್ಶನ'ವು ಸೇರಿದೆ. ಈ ಗ್ರಂಥವನ್ನು ಬರೆದ ಮಾಧವಾಚಾರ್ಯರು ವೇದಭಾಷ್ಯಕಾರರಾದ ಸಾಯಣರ ಸೋದರರು, ವಿಜಯನಗರದ ಅರಸ ಬುಕ್ಕರಾಯನ ಕಾಲದಲ್ಲಿದ್ದವರು. ಇದೇ ಅರಸನ ಆಸ್ಥಾನದಲ್ಲಿದ್ದ ವಿಷ್ಣುದೇವನೆಂಬ ವೈದ್ಯನು 'ರಸರಾಜಲಕ್ಷ್ಮಿ' ಯೆಂಬ ಗ್ರಂಥವನ್ನು ರಚಿಸಿ ರಸೌಷಧಿಗಳನ್ನು ತಯಾರಿಸುವ ಬಗೆಗಳನ್ನು ವಿವರಿಸಿದ್ದಾನೆ.

ಮಂಗಳೂರಿನ ಕದರಿಯಲ್ಲಿ ತುಂಬ ಹಿಂದಿನಿಂದ ನಾಥ

ಸಿದ್ಧಪಂಥದ ಜೋಗಿಗಳ ವಸತಿಯೊಂದು ಇದ್ದಿತು. ಈಗಲೂ ಅಲ್ಲಿ ಇದೇ ಸಂಪ್ರದಾಯದ ಅವಧೂತಯೋಗಿಗಳ ಮಠವೊಂದು ಉಳಿದಿದೆ. ಈ ಸಂಪ್ರದಾಯದವರೇ ಉತ್ತರಭಾರತದಲ್ಲಿ ರಸವಾದವನ್ನು ಎತ್ತಿಹಿಡಿದವರು. ಪಾದರಸದ ಹಿರಿಮೆಯನ್ನೂ ಗುಣಗಳನ್ನೂ ಪ್ರಯೋಗಸಿದ್ಧವಾಗಿ ಕೈಗೂಡಿಸಿಕೊಂಡರಲ್ಲದೆ, ಅದರ ನೆರವಿನಿಂದ ಕ್ಷುದ್ರಧಾತುವನ್ನು ಬಂಗಾರವನ್ನಾಗಿ ಮಾರ್ಪಡಿಸುವ ಮತ್ತು ದುರ್ಬಲ ಶರೀರವನ್ನು ವಜ್ರಶರೀರವನ್ನಾಗಿಸುವ ರಹಸ್ಯಗಳನ್ನು ಕುರಿತು ಅನ್ವೇಷಣೆಗಳನ್ನು ನಡೆಸಿದರು. ಇದೇ ರಸವಾದವೆನಿಸಿಕೊಂಡಿತು. ಇದರ ಆಸರೆಯಲ್ಲಿ ರಸವೈದ್ಯವೂ ಬೆಳೆಯಿತು. ಮಂಗಳೂರು ಒಂದು ಕಾಲಕ್ಕೆ ಇದರ ಕೇಂದ್ರವಾಗಿದ್ದು ಅದರ ನೆರೆಯಲ್ಲೆಲ್ಲ ಇದರ ಪ್ರಭಾವ ಹರಡಿದಂತೆ ತೋರುತ್ತದೆ.

ವೈದ್ಯರಲ್ಲಿ ಮಂತ್ರ–ಯಂತ್ರಗಳ ಬಳಕೆ ಅಥರ್ವವೇದದ ಕಾಲದಿಂದಲೂ ಬೆಳೆದುಬಂದಿದೆ.ದೇಶದ ಎಲ್ಲ ಭಾಗಗಳಲ್ಲಿಯೂ ಇದನ್ನು ಕಾಣಬಹುದು. ಕನ್ನಡನಾಡಿನಲ್ಲೂ ವಿಶೇಷವಾಗಿ ಹರಡಿದ್ದಿತೆನ್ನಲು ಆಧಾರವಿದೆ. ಈ ಬಳಕೆಯನ್ನು ಇಂದಿಗೂ ಗುರುತಿಸಬಹುದು. ಬಾಲಗ್ರಹ, ವಿಷದಂಶ, ಅಪಸ್ಮಾರ ಮೊದಲಾದ ವಿಶಿಷ್ಟ ರೋಗಗಳಲ್ಲಿ ಮಂತ್ರ–ಯಂತ್ರಗಳ ಪಾತ್ರ ಹೆಚ್ಚಿನದು. ಸಂಸ್ಕೃತಮಂತ್ರಗಳಲ್ಲದೆ ಕನ್ನಡ, ಅಪಭ್ರಂಶ, ಉರ್ದು, ಪರ್ಶಿಯನ್, ಅರಾಬಿಕ್ ಮೊದಲಾದ ಕಲಬೆರಿಕೆ ಮಂತ್ರಗಳನ್ನೂ ಬಳಸುವುದಿದೆ.

ಒಡೆಯರ ಉತ್ತೇಜನ

ಮೈಸೂರು ಸಂಸ್ಥಾನವಾಗಿದ್ದಾಗ ಅದನ್ನು ಆಳುತ್ತಿದ್ದ

ಒಡೆಯರ ಆಸ್ಥಾನದಲ್ಲಿ ಆಯುರ್ವೇದ ಪಂಡಿತರಿಗೆ ಮರ್ಯಾದೆ ಇದ್ದಿತು. ಅವರೇ ರಾಜವೈದ್ಯರಾಗಿದ್ದವರು. 15ನೆಯ ಶತಮಾನದ ಕಡೆಗಾಲದವರೆಗೆ ಇದೊಂದೇ ವೈದ್ಯಪದ್ಧತಿಯೇ, ಈ ಕಡೆ ಬಳಕೆಯಲ್ಲಿದ್ದುದಷ್ಟೆ? ಅರಸರಾಗಲೀ ಕೂಲಿಯುವರಾಗಲೀ ಅವರ ಜಡ್ಡು ಹರಿಯಲು ಆಯುರ್ವೇದ ಮದ್ದೇ ಇದ್ದುದು. ಅರಸರು ವಿದ್ಯಾಪಕ್ಷಪಾತಿಗಳಾಗಿದ್ದುದರಿಂದ ಸಮರ್ಥರಾದ ವೈದ್ಯರಿಗೆ ಉತ್ತೇಜನವಿದ್ದಿತು; ಅವರಿಂದ ಗ್ರಂಥರಚನೆಯೂ ಸಾಗುತ್ತಿದ್ದಿತು. ಹೀಗಾಗಿ ಮೈಸೂರು ಸಂಸ್ಥಾನದಲ್ಲಿ ಆಗ ಹತ್ತಾರು ಪ್ರಖ್ಯಾತ ವೈದ್ಯರೂ ಕಾಣಿಸಿಕೊಂಡರು, ನೂರಾರು ವೈದ್ಯಗ್ರಂಥಗಳೂ ಮೈದೋರಿದುವು.

ಅರಸರ ಮನೆತನದವರೇ ವೈದ್ಯಶಾಸ್ತ್ರದಲ್ಲಿ ಪರಿಣತರಾಗಿರುತ್ತಿದ್ದುದೂ ಉಂಟು. ಈ ಮೊದಲೇ ಪ್ರಸ್ತಾಪಕ್ಕೆ ಬಂದ ವೀರರಾಜ ('ವೈದ್ಯಸಂಹಿತಾರ್ಣವ'ವನ್ನು ಬರೆದವನು) ಮೈಸೂರಿನ ಅರಸರಾಗಿದ್ದ ಚಿಕ್ಕದೇವರಾಜ ಒಡೆಯರ ನೆಂಟ; ಅರಸರ ಪಡೆಯ ದಳವಾಯಿಯಾಗಬೇಕಾಗಿದ್ದವನು. ಆದರೆ ಅವನಿಗೆ ಆಯುರ್ವೇದದ ಗೀಳು ಹತ್ತಿ ಅದರಲ್ಲೇ ಮುಳುಗಿದನು. ಈ ಹುಚ್ಚು ಅವನ ಮಗ ನಂಜರಾಜನಿಗೂ ಸಾಗಿ ಬಂದಿತು. ತಂದೆ 'ವೈದ್ಯಸಂಹಿತಾರ್ಣವ'ವನ್ನು ಬರೆದರೆ ಮಗ 'ವೈದ್ಯಸಾರಸಂಗ್ರಹ'ವನ್ನು ಬರೆದ. ಎರಡೂ ಸೊಗಸಾದ ಗ್ರಂಥಗಳೇ ಆದುವು. ಅರಸರೇ ಆಗಿ ಸಿಂಹಾಸನದ ಮೇಲೆ ಕೂತಿದ್ದ ಇಮ್ಮಡಿ ಕೃಷ್ಣರಾಜ ಒಡೆಯರೂ (1734-1766) ವೈದ್ಯವನ್ನು ತಿಳಿದಿದ್ದವರು. ವಾಗ್ಭಟನ 'ಅಷ್ಟಾಂಗ-ಹೃದಯ'ಕ್ಕೆ ಅವರೊಂದು ಟೀಕೆಯನ್ನು ಬರೆದಿದ್ದರಂತೆ!

ಮೈಸೂರು ರಾಜ್ಯವನ್ನು ಆಳುತ್ತಿದ್ದ ಹಿರಿಯ ಬೆಟ್ಟದ ಚಾಮರಾಜ ಒಡೆಯರೂ (1492-1553) ವೈದ್ಯದಲ್ಲಿ ಪರಿಶ್ರಮ

ವಿದ್ದವರು. ಗುಂಡ್ಲು ಪೇಟೆಯ ಗೋಪಾಲಸೂರಿ ಎಂಬ ಆಯುರ್ವೇದ ಪಂಡಿತರನ್ನು ಮೈಸೂರಿಗೆ ಕರೆಯಿಸಿಕೊಂಡು ವೈದ್ಯ ಮನೆತನವೇ ಒಂದು ಬೆಳೆಯುವಂತೆ ಮಾಡಿದರು. 'ಗುಂಡ್ಲು ಪಂಡಿತ'ರೆಂದು ಈ ಮನೆತನದ ಹೆಸರಾಯಿತು. ಇಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನದಲ್ಲಿ ಈ ಮನೆತನದ ವೇಂಕಟನಾರಾಯಣಯ್ಯಂಗಾರರು ಪ್ರಸಿದ್ಧ ವೈದ್ಯರಾಗಿದ್ದರು.

ಖಾಸಾ ಚಾಮರಾಜ ಒಡೆಯರ ಕಾಲದಲ್ಲಿ ಪ್ರಬಲನಾದ ನವಾಬ ಹೈದರ್ ಆಲಿ ಖಾನನು 1782ರಲ್ಲಿ ತೀರಿಕೊಂಡ ಮೇಲೆ ಅವನ ಮಗ ಟೀಪೂಸುಲ್ತಾನನು ತಾನೇ ಸರ್ವಾಧಿಕಾರಿಯಾಗಿ ಆಡಳಿತ ನಡೆಸುತ್ತಿರುವಾಗ ಮೈಸೂರು ಸೀಮೆಯಲ್ಲಿ ಯುನಾನಿ ವೈದ್ಯದ ಬಳಕೆ ಹೆಚ್ಚಾಯಿತು. ಈ ವೈದ್ಯಪದ್ಧತಿಯು ಮೂಲ ದಲ್ಲಿ ಆಯುರ್ವೇದವೇ ಆದರೂ ಇಸ್ಲಾಂ ಚೌಕಟ್ಟಿನಲ್ಲೇ ಬೆಳೆ ದುದರಿಂದ ಕೆಲವೊಂದು ವಿಶೇಷ ಲಕ್ಷಣಗಳನ್ನು ಪಡೆದು ಕೊಂಡು ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಹರಡಿದ್ದಿತು. ನಮ್ಮ ದೇಶಕ್ಕೆ ಮೊಗಲರು ಆಳರಸರಾದಾಗ ಹಕೀಮರು ಪರ್ಶಿಯ, ಅರೇಬಿಯ ಮೊದಲಾದ ಕಡೆಗಳಿಂದ ಬರತೊಡಗಿದರು. ಈ ವೈದ್ಯಪದ್ಧತಿಯು ಉತ್ತರ ಭಾರತದಲ್ಲಿ ಆಯುರ್ವೇದ ದೊಂದಿಗೇ ಇದ್ದಾಗಲೂ ದಕ್ಷಿಣದ ಕಡೆ ಅಷ್ಟಾಗಿ ಕಾಣಿಸಿ ಕೊಂಡಿರಲಿಲ್ಲ; ಮೈಸೂರಿನ ನೆರೆಯಲ್ಲಿ ಮುಸ್ಲಿಮ ನವಾಬರು ಪ್ರಭುಗಳಾದ ಸೀಮೆಗಳಲ್ಲಿ ಕೊಂಚಮಟ್ಟಿಗೆ ಬಳಕೆಗೆ ಬಂದಿ ದ್ದಿತು. ಮೈಸೂರಿಗೆ ಹೊಕ್ಕದ್ದೂ ಆ ಸುಮಾರಿನಲ್ಲೇ. ಟೀಪೂ ಸುಲ್ತಾನನ ಅಧಿಕಾರಾವಧಿಯಲ್ಲಿ (ತೀರಿಕೊಂಡದ್ದು 1799) ಮೈಸೂರಿನಲ್ಲಿ ಈ ಪದ್ಧತಿಗೆ ಪ್ರೋತ್ಸಾಹ ದೊರೆಯಿತೆಂದು ತೋರುತ್ತದೆ. ಅಂದಿನಿಂದ ಕರ್ನಾಟಕದಲ್ಲಿ ಈ ವೈದ್ಯವೂ



ಗುಂಡ್ಲು ಪಂಡಿತ ಲಕ್ಷ್ಮಣಾಚಾರ್ಯ

ಉಳಿದು ಬೆಳೆದು ಬಂದಿದೆ; ಒಡೆಯರ ಉತ್ತೇಜನವೂ ಒದಗಿ ಬಂದಿತು.

ಟೀಪೂಸುಲ್ತಾನನ ಸಾವೂ ಇಂಗ್ಲೀಷರ ಬರವೂ ಒಂದುಗೂಡಿತು. ಅಲ್ಲಿಂದ ಮುಂದೆ ರಾಜ್ಯದ ಆಡಳಿತವೆಲ್ಲ ಇಂಗ್ಲೀಷ್ ಅಧಿಕಾರಿಗಳ ಕೈಸೇರಿತೆನ್ನಬಹುದು. ಹೆಸರಿಗೆ ಅರಸರು ಸಿಂಹಾಸನವನ್ನೇರಿ ಕುಳಿತಿದ್ದರಾದರೂ, ದಿಟವಾಗಿ ಆಳುತ್ತಿದ್ದವರು ಇಂಗ್ಲೀಷ್ ಅಧಿಕಾರಿಗಳೇ. ಟೀಪೂಸುಲ್ತಾನನ ಮರಣಾನಂತರ ಮೈಸೂರು ಅರಸೊತ್ತಿಗೆ ಮುಮ್ಮಡಿ ಕೃಷ್ಣರಾಜ ಒಡೆಯರ ಪಾಲಿಗೇ ಬಂದಿತು. ಇವರು ಅರವತ್ತೊಂಬತ್ತು ವರ್ಷಗಳ ಕಾಲ ಅರಸರೆನಿಸಿಕೊಂಡಿದ್ದರೂ ಮೂವತ್ತೇಳು ವರ್ಷಗಳು (1831 ರಿಂದ 1868ರ ವರೆಗೆ) ಬ್ರಿಟಿಷ್ ಕಮಿಷನ್ ನೇರವಾಗಿ ರಾಜ್ಯಭಾರವನ್ನು ಮಾಡಿತು! ಈ ರಾಜ್ಯಭಾರ 1868ರಲ್ಲಿ ಮುಗಿದು ಚಾಮರಾಜ ಒಡೆಯರು ಮೈಸೂರು ಮಹಾರಾಜರಾಗಿ ರಾಜ್ಯಸೂತ್ರವನ್ನು ಕೈಗೊಂಡಮೇಲೂ ಬ್ರಿಟಿಷರ ಆಡಳಿತ ಧೋರಣೆಯೇ ಮುಂದುವರಿಯಿತು; ಇನ್ನಷ್ಟು ಬಿಗಿಯಾಯಿತು.

ಹೀಗೆ ಸಂಸ್ಥಾನದ ಜನಜೀವನದ ಮೇಲೂ ಆಡಳಿತದ ಮೇಲೂ ಇಂಗ್ಲೀಷ್ ಜನರ ಪ್ರಭಾವ ಹೆಚ್ಚಾಗತೊಡಗಿದಾಗ ಆಯುರ್ವೇದಕ್ಕೆ ಭಾರಿ ಪೆಟ್ಟು ಬಿದ್ದಿತು. ಐರೋಪ್ಯ ಪದ್ಧತಿಯ ವೈದ್ಯವೇ ಪ್ರಬಲವಾಯಿತು; ಆಯುರ್ವೇದ, ಯುನಾನಿ ಎರಡೂ ಹಿಂದಕ್ಕೆ ಸರಿದುವು. ಅಧಿಕಾರಿಗಳ ಅಸಡ್ಡೆಯೊಂದಿಗೆ ಜನರ ಅನಾದರವೂ ಸೇರಿತು. ಇಂಥ ಪರಿಸ್ಥಿತಿಯಲ್ಲೂ ರಾಜರು ಆಯುರ್ವೇದವನ್ನು ಅಷ್ಟಿಷ್ಟು ಪ್ರೋತ್ಸಾಹಿಸಿದ್ದರೆನ್ನುವುದನ್ನು ಮರೆಯಲಾಗದು.

ಮುಮ್ಮಡಿ ಕೃಷ್ಣರಾಜ ಒಡೆಯರು ಸ್ವಭಾವದಿಂದಲೇ ಸಂಪ್ರದಾಯಶೀಲರು, ಹಳೆಯ ವಿದ್ಯೆಯನ್ನು ಗೌರವಿಸುತ್ತಿದ್ದ

ವರು, ಸ್ವತಃ ಪಂಡಿತರು. ಸಹಜವಾಗಿಯೇ ಅವರ ಪರಿವಾರದಲ್ಲಿ ಆಯುರ್ವೇದ ವೈದ್ಯರಿರುತ್ತಿದ್ದರು.ಗುಂಡ್ಲು ಪಂಡಿತ ಮನೆತನದ ವೇದಾಂತಾಚಾರ್ಯರೂ ಎಡೆತೊರೆ ನಾರಾಯಣ ಪಂಡಿತರೂ ಆ ಕಾಲಕ್ಕೆ ಹೆಸರಾದ ವೈದ್ಯರು. ಆದರೂ ಅರಸರ ಕೈಕಟ್ಟಿ ಐರೋಪ್ಯ ವೈದ್ಯ ನುಸುಳಿಕೊಂಡು ಮುನ್ನುಗ್ಗಿ ಬಂದಿತು. ಬ್ರಿಟಿಷ್ ಕಮಿಷನರ್ ಅರಸರ ಅಧಿಕಾರವನ್ನು ಮೊಟಕು ಮಾಡಿ ತಾನೇ ಆಳತೊಡಗಿದ ತರುಣದಲ್ಲಿ ಒದಗಿದ ಮಾರ್ಪಾಟನ್ನು ಕುರಿತು ಅರಮನೆಯ ದಾಖಲೆಯೇ ಹೀಗೆ ಒಕ್ಕಣಿಸುತ್ತದೆ:"ಅದೇ ರೀತಿ ಸುಮಾರು ಅದೇ ಕಾಲದಲ್ಲಿ(ಎಂದರೆ 1833ರ ಸುಮಾರಿಗೆ) ದೊರೆಗಳವರು ಮೈಸೂರು ರಾಜಧಾನಿಯಲ್ಲಿ ಜನೋಪಕಾರಾರ್ಥವಾಗಿ ಇಂಗ್ಲಿಷ್ ಪದ್ಧತಿಗನುಸಾರವಾಗಿ ಒಂದು ವೈದ್ಯಶಾಲೆಯನ್ನು ಸಹ ನಿರ್ಮಿಸಿದರು. ಖಾವಂದರವರ ದರ್ಬಾರ್ ಸರ್ಜನ್‌ರವರು ಇದರ ಮೇಲ್ವಿಚಾರಣೆಯನ್ನು ನಡೆಸಿದರು."(ಶ್ರೀಮನ್ಮಹಾರಾಜರವರ ವಂಶಾವಳಿ,ಎರಡನೆಯ ಭಾಗ, ಅರಮನೆಯ ಪ್ರಕಟಣೆ, 1922 ಪುಟ 109).ಇದನ್ನು 'ಅರಮನೆ ಆಸ್ಪತ್ರೆ'ಯೆಂದೇ ಕರೆಯುತ್ತಿದ್ದರು.

ನಾಡವೈದ್ಯವನ್ನು ಹಿಂದೂಡಲು ಆಂಗ್ಲ ಪ್ರಭುಗಳು ಕೈಗೊಂಡ ಮೊದಲ ಹೆಜ್ಜೆ ಇದು. ಇಷ್ಟಾದ ಮೇಲೆ ಅಧಿಕಾರಿಗಳ ಒಲವೂ ಮಹಾಜನರ ಅನುರಾಗವೂ ಯಾವ ಕಡೆ ತಿರುಗಿತೆಂದು ಬೇರೆ ಹೇಳಬೇಕಾಗಿಯೇ ಇಲ್ಲ. ಹಳೆಯ ಸಂಸ್ಕೃತಿಯ ಹಿಡಿತ ಹೋಗಬೇಕೆಂದು, ಬ್ರಿಟಿಷ್ ಕಮಿಷನ್ ತನ್ನ ಅಧಿಕಾರ ಮುಗಿಯುವ ವೇಳೆಗೆ ಮುಂದೆ ಮಹಾರಾಜರಾಗುವ ಚಾಮರಾಜ ಒಡೆಯರ ಶಿಕ್ಷಣಕ್ಕೆ ತಮಗೆ ಅನುಕೂಲವಾದ ಏರ್ಪಾಡು ಮಾಡಿದರು. ಐದು ವರ್ಷದ ಹುಡುಗನಾಗಿರುವಾಗಲೇ ಚಾಮರಾಜ ಒಡೆಯರ ಶಿಕ್ಷಣ ಮತ್ತು ಮೇಲ್ವಿಚಾರಣೆ ಲೆಫ್ಟಿನೆಂಟ್

ಕರ್ನಲ್ ಗ್ರಿಗೊರಿ ಹೆಯ್ನ್ಸ್ ಎಂಬುವನ ಪಾಲಿಗೆ ಬಂದಿತು. ಅವನ ಕೈಕೆಳಗೆ ಬೆಳೆದ ಅರಸರಿಗೆ ಆಯುರ್ವೇದದ ಮೇಲೆ ಎಷ್ಟು ಮಮತೆಯಿದ್ದೀತು ? ಈ ಅರಸರನ್ನು ವಿಧ್ಯುಕ್ತವಾಗಿ ಸಿಂಹಾಸನದ ಮೇಲೆ ಕೂರಿಸಿದ ಸಂದರ್ಭದಲ್ಲಿ ಎಂದರೆ 1880 ರಲ್ಲಿ, ಆಂಗ್ಲ ಆಳರಸರು ಸಂಸ್ಥಾನದಲ್ಲಿ ಹತ್ತೊಂಬತ್ತು 'ಇಂಗ್ಲೀಷ್' ಪದ್ಧತಿಯ ಆಸ್ಪತ್ರೆಗಳನ್ನು ವ್ಯವಸ್ಥೆ ಮಾಡಿದರು.

ಆಂಗ್ಲರೇ ನೇರವಾಗಿ ಆಡಳಿತ ನಡೆಸುತ್ತಿದ್ದ ಮುಂಬಯಿ ಮತ್ತು ಮದರಾಸು ಪ್ರಾಂತ್ಯಗಳಲ್ಲಿ ಆ ವೇಳೆಗಾಗಲೇ ಈ ಬಗೆಯ ಆಸ್ಪತ್ರೆಗಳಿದ್ದುವು. ಈ ವೈದ್ಯಪದ್ಧತಿಯನ್ನು ನಮ್ಮ ಉತ್ಸಾಹಿ ತರುಣರಿಗೆ ಕಲಿಸುವ ಏರ್ಪಾಟನ್ನೂ ಅವರು ಅಲ್ಲಿ ಮಾಡಿದ್ದರು. ಅಲ್ಲಿ ಕಲಿತವರೇ ನಮ್ಮ ಸಂಸ್ಥಾನದ ಆಸ್ಪತ್ರೆಗಳಲ್ಲಿ ಕೆಲಸಮಾಡಬೇಕೆಂಬ ಕಟ್ಟುಪಾಡೂ ಸಿದ್ಧವಾಯಿತು. ಇಲ್ಲಿನ ನಾಡವೈದ್ಯರಿಗೆ ಅವಕಾಶ ದೊರೆಯದಿದ್ದುದು ಸಹಜವೇ. ಆದರೆ ಇಲ್ಲಿನವರು ಮುಂಬಯಿ, ಮದರಾಸು ನಗರಗಳಿಗೆ ಹೋಗಿ ಆ ಬಗೆಯ ವೈದ್ಯವನ್ನು ಕಲಿತು ಹಿಂದಿರುಗಲು ಪ್ರೇರಣೆಯನ್ನು ಈ ವ್ಯವಸ್ಥೆ ಒದಗಿಸಿತು. ಆ ಪ್ರಾಂತ್ಯಗಳಲ್ಲಿ ಆ ವೇಳೆಗಾಗಲೇ ಆಯುರ್ವೇದ ಮೂಲೆಗುಂಪಾಗಿದ್ದಿತು. ಆ ಗಾಳಿ ಈಗ ಈ ಕಡೆ ಬೀಸಿತು.

ಈ ಆಂದೋಲನದ ಫಲವಾಗಿ, 1928ರಷ್ಟು ಹಿಂದೆಯೇ ನಮ್ಮ ಸಂಸ್ಥಾನದ ಜನ ಸಮುದಾಯದಲ್ಲಿ ಪ್ರತಿ ಹದಿನೆಂಟು ಸಾವಿರ ಜನರಿಗೆ ಮುನ್ನೂರ ಮೂವತ್ತು ಪಾಶ್ಚಾತ್ಯ ಪದ್ಧತಿಯ ವೈದ್ಯರಂತೆ ಇದ್ದರೆಂದು ದಾಖಲೆಯಿದೆ. ಇವರಲ್ಲಿ ನಲವತ್ತು ಜನರಷ್ಟೇ ಖಾಸಗಿ ವೈದ್ಯರು, ಇವರು ಬಹುಮಟ್ಟಿಗೆ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿರುತ್ತಿದ್ದವರು. ಉಳಿದವರೆಲ್ಲ ಸರ್ಕಾರೀ ವೇತನವನ್ನು ಪಡೆದು ಜನರ ಗೌರವವನ್ನು ಗಳಿಸಿ

ಕೊಂಡ 'ಅಧಿಕಾರಿವೈದ್ಯರು'. ಈ ಪರಿಸ್ಥಿತಿಯಲ್ಲಿ ಆಯುರ್ವೇದವನ್ನು ಕಲಿಯುವ ತರುಣ ಯಾರು ? ಆಯುರ್ವೇದ ವೈದ್ಯನ ಹತ್ತಿರ ಹೋಗುವ ರೋಗಿ ಯಾರು? ಈ ಸ್ಫೂರ್ತಿ ಸಾಲದೆಂಬಂತೆ 1931ರಲ್ಲಿ ಸಂಸ್ಥಾನದ ವಿಧಾನ ಸಭೆಯು ಐರೋಪ್ಯ ಪದ್ಧತಿಯಲ್ಲಿ ವೈದ್ಯವನ್ನು ಕಲಿತು ಪದವಿಯನ್ನು ಪಡೆದುಕೊಂಡವನೇ ವೈದ್ಯವೃತ್ತಿಯನ್ನು ಹಿಡಿಯಬೇಕೆಂಬ ಕಾಯಿದೆಯನ್ನೂ ಹೊರತಂದಿತು !

ಅರಸರ ಆಸ್ಥಾನದಲ್ಲಿ ಅಲಂಕಾರಕ್ಕೆಂದು ಕವಿಗಳೂ ವಿದೂಷಕರೂ ಇದ್ದಂತೆ ವೈದ್ಯರೂ ಇರುತ್ತಿದ್ದರು. ಇದರಿಂದ ಆಯುರ್ವೇದಕ್ಕೆ ಮನ್ನಣೆಯಿದ್ದಿತೆಂದು ಬಗೆಯಬಾರದು. ಹಿಂದಿನಿಂದ ಬಂದ ಸಂಪ್ರದಾಯದಂತೆ ರಾಜನಿಗೊಬ್ಬ ರಾಜವೈದ್ಯನೆಂಬ ಆಯುರ್ವೇದ ಪಂಡಿತನಿರುತ್ತಿದ್ದನಾದರೂ ಅರಸರ ಆರೋಗ್ಯವನ್ನು ನೋಡಿಕೊಳ್ಳುವ ಹೊಣೆ ಹೊಸಬಗೆಯ ವೈದ್ಯನಿಗೇ; ಅವನೇ 'ದರ್ಬಾರ್ ಫಿಸಿಶಿಯನ್'. ಆದರೆ ಆಯುರ್ವೇದದ ಪುಣ್ಯದಿಂದ ಅರಸರ ಬಳಿಯಿದ್ದ ವೈದ್ಯರಲ್ಲೇ ತುಂಬ ಸಮರ್ಥರಾದವರಿದ್ದರು : ಅಗರದ ಪುಟ್ಟುಸ್ವಾಮಿ ಪಂಡಿತರು, ಅಂಬಳೆ ನರಸಿಂಹ ಪಂಡಿತರು, ಹೊಸಪಂಡಿತ ಭೀಮರಾಯರು, ನೇತ್ರವೈದ್ಯ ನಂಜುಂಡಭಟ್ಟರು ಮೊದಲಾದವರು. ಇವರ ಆಸಕ್ತಿಯಿಂದಾಗಿ ರಾಜ್ಯದಲ್ಲಿ ಆಯುರ್ವೇದ ಉಸಿರಾಡುವಂತಾಯಿತು. ಸಾಯಲಿಲ್ಲ.

ಇದುವರೆಗೆ ಆಯುರ್ವೇದ ಶಿಕ್ಷಣ ಗುರುಕುಲಪದ್ಧತಿಯಲ್ಲಿಯೇ ನಡೆಯುತ್ತಿದ್ದಿತು. ಈಗ ಜನರ ನೋಟದಲ್ಲಿ ಹಿಂದುಳಿದ ಆಯುರ್ವೇದವನ್ನು ಶಾಲೆಯಲ್ಲಿ ಕಲಿಸುವ ಹವಣಿಕೆ ಮೂಡಿಕೊಂಡಿತು. ಆದರೆ ಅದಕ್ಕೆ ಸ್ವತಂತ್ರವಿದ್ಯೆಯ ಅಥವಾ ವೈದ್ಯದ ಸ್ಥಾನವನ್ನು ಕೊಡಲೊಪ್ಪದೆ, ಮಹಾರಾಜರು ನಡೆಸು

ತ್ತಿದ್ದ ಸಂಸ್ಕೃತಪಾಠಶಾಲೆಯಲ್ಲಿ ತರ್ಕ, ವ್ಯಾಕರಣ, ಸಾಹಿತ್ಯ, ವೇದಾಂತಗಳಂತೆ ಆಯುರ್ವೇದವನ್ನೂ ಕಲಿಸುವ ಏರ್ಪಾಡನ್ನು 1834ರಲ್ಲಿ ಮಾಡಲಾಯಿತು. ಆಯುರ್ವೇದದ ಬಲವನ್ನು ಮುರಿಯಲು ಈ ಕ್ರಮ ನೆರವಾದುದು ಸಹಜವೆ. ಚಾಮರಾಜ ಒಡೆಯರ ಔದಾರ್ಯ, ಆಸಕ್ತಿ ಪ್ರಕಟವಾದುದು ಹೀಗೆ! ಪಾಠ ಶಾಲೆಯಲ್ಲಿ ಆಯುರ್ವೇದವನ್ನು ಕಲಿಸಲು ನೇಮಕಗೊಂಡವರು ಅಗರದ ಪುಟ್ಟುಸ್ವಾಮಿ ಪಂಡಿತರು, ಅರಸರ ಆಸ್ಥಾನ ವಿದ್ವಾಂಸ ರಾಗಿದ್ದವರು. ಆದರೆ ಅರಸರು ಅರೆಮನಸ್ಸಿನಿಂದ ನೀಡಿದ ಈ ದಾನವನ್ನು ಸದುಪಯೋಗಪಡಿಸಿಕೊಂಡರು ಈ ಪಂಡಿತರು. ಇವರ ಸಾಮರ್ಥ್ಯವು ಪಂಡಿತ ದೀವಿ ಗೋಪಾಲಾಚಾರ್ಲು ಮೊದಲಾದ ಸಮರ್ಥ ತರುಣರನ್ನು ಆಕರ್ಷಿಸಿಕೊಂಡಿತು. ವಿದ್ಯಾರ್ಥಿಗಳ ಉಪಯೋಗಕ್ಕೆಂದು ಇವರು ಒಂದೆರಡು ವೈದ್ಯಗ್ರಂಥಗಳನ್ನು ಬರೆದರು—ಲೋಲಂಬರಾಜೀಯಕ್ಕೆ ದೀಪಿಕೆ ಮತ್ತು ವೈದ್ಯ ಬಾಲಬೋಧೆ.

ಸಂಸ್ಕೃತ ಪಾಠಶಾಲೆಯಲ್ಲಿ ಆಯುರ್ವೇದ ವೈದ್ಯದ ಶಿಕ್ಷಣಕ್ಕೆ ಇನ್ನಷ್ಟು ಹೆಚ್ಚಿನ ಅವಕಾಶವನ್ನು ಮಾಡಿಕೊಟ್ಟು ಬೇರೆಯ ವೈದ್ಯವಿಭಾಗವನ್ನೇ ತೆರೆಯಲು ಕಾರಣರಾದವರು ಚಾಮರಾಜ ಒಡೆಯರ ಇನ್ನೊಬ್ಬ ಆಸ್ಥಾನವಿದ್ವಾಂಸರಾಗಿದ್ದ ಅಗರದ ಅಣ್ಣಯ್ಯ ಪಂಡಿತರು. ಇವರು ವಾಗ್ಭಟನ ಅಷ್ಟಾಂಗ ಹೃದಯದಲ್ಲಿ ತುಂಬ ಪರಿಶ್ರಮವನ್ನು ಪಡೆದಿದ್ದವರು, ಸ್ವತಂತ್ರವಾಗಿ ವೈದ್ಯವೃತ್ತಿಯನ್ನು ಅವಲಂಬಿಸಿದ್ದವರು ; ಸುಮಾರಾಗಿ ಅನುಕೂಲವಾಗಿದ್ದವರು. ಸಂಸ್ಕೃತಪಾಠಶಾಲೆಯ ಚೌಕಟ್ಟಿನಲ್ಲಿ ಆಯುರ್ವೇದ ಶಿಕ್ಷಣ ಸಮರ್ಪಕವಾಗಲಾರದೆಂಬುದನ್ನು ಅವರು ಮನಗಂಡು ಪ್ರತ್ಯೇಕವಾಗಿ ವಿದ್ಯಾಶಾಲೆಯೊಂದನ್ನು 1910ರ ಸುಮಾರಿಗೆ ಅರಸರ ನೆರವಿನಿಂದ ಮೈಸೂರು ನಗರದ

ಅಣ್ಣಯ್ಯ ಪಂಡಿತರು

ದೇವರಾಜ ಮಾರುಕಟ್ಟೆಯ ಹತ್ತಿರ ವ್ಯವಸ್ಥೆ ಮಾಡಿದರು. ವಿದ್ಯಾಶಾಲೆಗೆ ಹೊಂದಿಕೊಂಡಂತೆ ವೈದ್ಯಶಾಲೆಯೊಂದನ್ನು ಅಳವಡಿಸಿದರು. ವಿದ್ಯಾಶಾಲೆಗೆ ಮುಖ್ಯಸ್ಥರಾಗಿ ನಿಂತು ತ್ಯಾಮ ಗೊಂಡ್ಲು ವೈ. ಲಕ್ಷ್ಮೀನರಸಿಂಹಶಾಸ್ತ್ರಿಗಳು ಶಾಲೆಯ ಕೀರ್ತಿ ಯನ್ನು ಹೆಚ್ಚಿಸಿದರು. ವೈದ್ಯವಿಭಾಗದ ಯಶಸ್ಸಿಗೆ ಕಾರಣರಾದ ವರು ಪುಟ್ಟುಸ್ವಾಮಿ ಪಂಡಿತರ ಶಿಷ್ಯರಾದ ಕೆಂಪುರಾಮಾ ಪಂಡಿತರು.

ಹೀಗೆ ಆಯುರ್ವೇದವು ಸಂಸ್ಕೃತಪಾಠಶಾಲೆಯ ಚೌಕಟ್ಟಿ ನಿಂದ ಹೊರಬಂದಿತಾದರೂ ಹೊಸಶಾಲೆಯ ಆಡಳಿತ ಸಂದುದು ಸರಕಾರದ ಧಾರ್ಮಿಕ ಸಂಸ್ಥೆಗಳನ್ನು ನೋಡಿಕೊಳ್ಳುವ ಮುಜ ರಾಯಿ ಇಲಾಖೆಗೆ ! ಆಯುರ್ವೇದವನ್ನು ವೈದ್ಯಇಲಾಖೆಯ ಬಳಿಯೂ ಸುಳಿಯಗೊಳಿಸಲಿಲ್ಲ ! ಆದರೆ 1927ರಲ್ಲಿ ಆಯು ರ್ವೇದ ಪಾಠಶಾಲೆಯು ಕಾಲೇಜಾಯಿತು : ಲಕ್ಷ್ಮೀನರಸಿಂಹ ಶಾಸ್ತ್ರಿಗಳು 'ಪ್ರಿನ್ಸಿಪಲ್' ಆದರು. ಆಯುರ್ವೇದ ವಿದ್ಯಾರ್ಥಿ ಗಳಿಗೆ ಆಧುನಿಕ ವೈದ್ಯದ ಕೆಲವು ಕ್ಷೇತ್ರಗಳ ಪರಿಚಯವು ಇರುವಂತೆ ಶಿಕ್ಷಣದ ಹರವನ್ನೂ ಅವಧಿಯನ್ನೂ ಕ್ರಮವನ್ನೂ ಹಿಗ್ಗಿಸಲಾಯಿತು. ಇದೇ ಕಾಲೇಜಿನಲ್ಲಿ ಯುನಾನಿ ಪದ್ಧತಿಯ ವೈದ್ಯರ ಶಿಕ್ಷಣಕ್ಕೂ ಅವಕಾಶವಿರುವಂತಾಯಿತು. ಈ ಕಾಲೇಜಿ ನಲ್ಲಿ ಕಲಿತ ಹಲವರು ವೈದ್ಯರು ರಾಜ್ಯದಲ್ಲಿ ಆಯುರ್ವೇದವನ್ನು ಉಳಿಸಿದ್ದಾರೆನ್ನುವುದು ಸಮಾಧಾನದ ಮಾತು.

ಕನ್ನಡನಾಡಿನಲ್ಲಿ ಆಯುರ್ವೇದದ ಅದೃಷ್ಟ ಎಷ್ಟೋ ಚೆನ್ನಾಗಿದ್ದಿತು. ನಾಡಿನ ಉಳಿದೆಡೆ ಅದರ ಅವಸ್ಥೆಯನ್ನು ಗಮ ನಿಸಿದರೆ ಇದು ತಿಳಿದೀತು. ಬಂಗಾಳದ ವಿಧಾನಸಭೆಯಲ್ಲಿ 1918ರಲ್ಲಿ ಸುರೇಂದ್ರನಾಥರಾಯ್ ಸರಕಾರವು ಆಯುರ್ವೇದಕ್ಕೆ ನೆರವನ್ನು ನೀಡಬೇಕೆಂಬ ಮಸೂದೆಯನ್ನು ಮಂಡಿಸಿದರು; ಅದು

ವೈ. ಲಕ್ಷ್ಮೀನರಸಿಂಹ ಶಾಸ್ತ್ರಿಗಳು

ತಿರಸ್ಕೃತವಾಯಿತು. ಗಣನಾಥ ಸೇನರು ಹೆಣಗಾಡಿ 1937ರಲ್ಲಿ ಆಯುರ್ವೇದ ವಿದ್ಯಾಶಾಲೆಯನ್ನು ಏರ್ಪಡಿಸಬೇಕಾದರೆ ಸಾರ್ವಜನಿಕರಿಂದ 7,750 ರೂಪಾಯಿಗಳನ್ನು ಸಂಗ್ರಹಿಸಿ ಸರಕಾರಕ್ಕೆ ಒಪ್ಪಿಸಬೇಕಾಯಿತು! ಗ್ವಾಲಿಯರ್ ಸಂಸ್ಥಾನಕ್ಕೆ ಸೇರಿದ್ದ ಉಜ್ಜಯಿನಿಯಲ್ಲಿ 1932ರಲ್ಲಿ ವಾಸುದೇವಮೆಹ್ತಾ ಶಾಸ್ತ್ರಿಗಳು 'ಅವಂತಿಕಾ ಆಯುರ್ವೇದ ವಿದ್ಯಾಲಯ'ವನ್ನು ಸ್ಥಾಪಿಸಿದರು. ಆರು ವರ್ಷಗಳ ನಂತರ ಮುಂಬಯಿಯಲ್ಲಿ ನೆರೆದ ಇಪ್ಪತ್ತೆಂಟನೆಯ ವೈದ್ಯ ಸಮ್ಮೇಲನವು ಈ ವಿದ್ಯಾಲಯಕ್ಕೆ ಗ್ವಾಲಿಯರ್ ಮಹಾರಾಜರು ಆರ್ಥಿಕನೆರವನ್ನು ನೀಡಬೇಕೆಂದು ನಿರ್ಣಯವನ್ನು ಮಾಡಬೇಕಾಯಿತು! ಹೆಚ್ಚು ಕಡಮೆ ಇದೇ ಕಥೆ ಉಳಿದೆಡೆಗಳಲ್ಲಿ. ಮದ್ರಾಸೊಂದನ್ನು ಬಿಟ್ಟು ಉಳಿದೆಲ್ಲ ಪ್ರಾಂತ್ಯಗಳಲ್ಲಿಯೂ ಮೊದಲ ಆಯುರ್ವೇದ ವಿದ್ಯಾಲಯಗಳೆಲ್ಲ ಖಾಸಗಿ ಸಂಸ್ಥೆಗಳೇ.

ಹೊಸ ಪಂಡಿತರು

ಚಾಮರಾಜ ಒಡೆಯರ ಆಸ್ಥಾನದಲ್ಲಿದ್ದ ವೈದ್ಯರಲ್ಲಿ 'ಹೊಸಪಂಡಿತ' ಭೀಮರಾಯರು ಇಲ್ಲಿಯೂ ಹೊರಗಡೆಯೂ ಪ್ರಸಿದ್ಧರಾದವರು. ಹಳೆಯ ಆಯುರ್ವೇದ ಗ್ರಂಥಗಳಲ್ಲಿ ಹೇಳದೆ ಹೊಸದಾಗಿ ಕಾಣಿಸಿಕೊಂಡ ರೋಗಗಳಿಗೂ ಹೊಸ ಮದ್ದುಗಳನ್ನು ಮಾಡುವವರೆಂದು ಅವರು'ಹೊಸಪಂಡಿತ'ರೆನಿಸಿಕೊಂಡರು. ಅವರ ವ್ಯಕ್ತಿತ್ವವು ಸ್ವಾರಸ್ಯವಾಗಿದ್ದಿತು. ಅವರು ನಾಡೀ ಪರೀಕ್ಷೆಯಲ್ಲಿ ನಿಪುಣರಾಗಿದ್ದು ಅದರ ವಿವರಗಳನ್ನು ಬರಹ, ಭಾಷಣ, ಪ್ರದರ್ಶನಗಳ ಮೂಲಕ ಜನರಿಗೆ ತಿಳಿಯಹೇಳಿದರಷ್ಟೇ ಅಲ್ಲದೆ, ಆಯುರ್ವೇದವು ಪಾಶ್ಚಾತ್ಯವೈದ್ಯಕ್ಕೆ

ಹೊಸಪಂಡಿತ ಭೀಮರಾಯರು

ಸರಿಸಮನಾಗಿ ನಿಲ್ಲಬಲ್ಲುದು ಎಂದು ಧೈರ್ಯವಾಗಿ ಸಾರಿ ಅಂದಿನ ಹೆಸರಾಂತ ಪಾಶ್ಚಾತ್ಯ ವೈದ್ಯರಿಗೆ ಸವಾಲನ್ನು ಹಾಕಿದರು. ಆಂಗ್ಲ ಅಧಿಕಾರಿಗಳೊಂದಿಗೆ ಸೆಣೆಸಿದರು. ಆಯುರ್ವೇದಕ್ಕೆ ಸರಿಯಾದ ಸ್ಥಾನಮಾನಗಳನ್ನು ಕೊಡಬೇಕೆಂದು ಅರಸರನ್ನೂ ಅಧಿಕಾರಿಗಳನ್ನೂ ಮತ್ತೆ ಮತ್ತೆ ಪೀಡಿಸುತ್ತಲೇ ಬಾಳನ್ನು ಕಳೆದರು. ವೈದ್ಯವೃತ್ತಿಯಲ್ಲಿ ಪ್ರಸಿದ್ಧರಾದ ಇವರು ಭಾರತದೇಶದಲ್ಲೆಲ್ಲ ಸಂಚರಿಸಿ ಈ ನಾಡಿನ ಆಯುರ್ವೇದ ಜ್ಞಾನ ಹಿರಿದಾದುದೆಂದು ಮನಗಾಣಿಸಿದರು. 'ವೈದ್ಯಸಂಗ್ರಹ'ವೆಂಬ ಗ್ರಂಥವನ್ನೂ 1885 ರಲ್ಲಿ ಪ್ರಕಟಿಸಿದರು. ಈ ಪುಸ್ತಕದ ಮೊದಲಲ್ಲಿ ಅವರು ಹೇಳಿರುವ ಮಾತುಗಳಲ್ಲಿ ಇವು ಅವರ ಸ್ವಭಾವವನ್ನೂ ಆಯುರ್ವೇದಾಭಿಮಾನವನ್ನೂ ತೋರಿಸುತ್ತವೆ.

"ನಮ್ಮ ಸೀಮೆಯಲ್ಲಿ ವೈದ್ಯಶಾಸ್ತ್ರವು ಪ್ರಕಾಶಕ್ಕೆ ಬರಲಿಲ್ಲ. ಅದು ಹೀಗೆ ಆಗುವುದಕ್ಕೆ ಮತ್ತೊಂದು ಕಾರಣವುಂಟು. ಅದನ್ನು ಹೇಳಿದರೆ ಕೆಲವರಿಗೆ ಕೋಪ ಬಂದೀತೆಂದು ಊಹಿಸುತ್ತೇನೆ. ಆದಾಗ್ಯೂ ವಿಚಾರ ಮಾಡಿದಲ್ಲಿ ಸರ್ವಜನಾಂಗೀಕಾರವೇ ಆದೀತೆಂದು ತಿಳಿದು ಹೇಳುತ್ತೇನೆ. ನಮ್ಮವರಲ್ಲಿ ಒಬ್ಬರೂ ಕ್ರಮವಾಗಿ ಶಾಸ್ತ್ರಾಭ್ಯಾಸಮಾಡದೆ ಕೊಂಚ ಅನುಭವವನ್ನು ಅವಲಂಬಿಸಿ, ವೈದ್ಯರೆಂಬ ಹೆಸರಿಟ್ಟುಕೊಂಡು, ರೋಗಿಗಳ ಕೈನೋಡಿ, ತೋಚಿದ್ದನ್ನು ಹೇಳಿ, ಇದ್ದದ್ದನ್ನು ಕೊಟ್ಟು, ಅದರಿಂದ ಗುಣವಾದರೆ ತಮ್ಮಿಂದಲೂ ತಮ್ಮ ಔಷಧದಿಂದಲೂ ಗುಣವಾಯಿತೆಂದು ಅಂದುಕೊಳ್ಳುತ್ತಾರೆ.... ತಮ್ಮಊಹೆಯೂ ಮತ್ತು ಔಷಧವೂ ನಿರರ್ಥಕವಾದರೂ, ಅನರ್ಥಾವಹವಾದರೂ ರೋಗಿಗಳ ದುರದೃಷ್ಟವೆಂಬುವರು, ಮತ್ತು ಶಾಸ್ತ್ರವನ್ನೂ ದೂಷಿಸುವರು. ಈ ಪ್ರಕಾರ ಶಾಸ್ತ್ರಬಲಹೀನರಾದ ನಮ್ಮ ವೈದ್ಯವೇಷಧಾರಿಗಳು ಒಪ್ಪುವರು. ಇದರ ದೆಸೆಯಿಂದ ವೈದ್ಯ

ನಾಮಧಾರಿಗಳು ಅಯೋಗ್ಯರೆಂದೆನಿಸಿಕೊಳ್ಳುವದಲ್ಲದೆ, ಮಹಾ ಮಹನೀಯವಾದ ನಮ್ಮ ವೈದ್ಯಶಾಸ್ತ್ರವನ್ನೂ ಕೂಡಾ ದೂಷ್ಯ ವಾಗುವ ಹಾಗೆ ಮಾಡುತ್ತಾರೆ. ಅಯ್ಯೋ ನಮ್ಮ ವೈದ್ಯಶಾಸ್ತ್ರವು ಈಗ ಇಂಥಾ ಅವಸ್ಥೆಯನ್ನು ಹೊಂದಿತೆ. !

ಈ ಪ್ರಕಾರ ಇಂಥಾ ದೆಸೆಯನ್ನು ಹೊಂದಿರುವ ನಮ್ಮ ವೈದ್ಯಶಾಸ್ತ್ರವನ್ನು ನಾವು ಪುನರುಜ್ಜೀವನವುಳ್ಳದ್ದನ್ನಾಗಿ ಮಾಡಿ ವೃದ್ಧಿ ಹೊಂದಿಸಬಾರದೆ? ನಮ್ಮವರಿಗೆ ಇದಕ್ಕಿಂತ ಮಿಂಚಿದ ಕಾರ್ಯ್ಯ ಯಾವುದುಂಟು? ಮತ್ತು ಈ ಶಾಸ್ತ್ರವು ಯಾವ ಕಾಲದಲ್ಲೋ ವೃದ್ಧಿಹೊಂದಿದ್ದು, ಕಾಲಕ್ರಮವಾಗಿ ಜೀರ್ಣಿಸಿ, ಕೊನೆಗೆ ಅಂದರೆ ನಮ್ಮ ಕಾಲದಲ್ಲಿ ನಾಮಮಾತ್ರಾವಶೇಷವಾಗಿ ಇರೋಣ ನಮಗೆ ಕೀರ್ತಿಕರವೆ ಅಲ್ಲ. ಆದಾಗ್ಯೂ ಕಾರ್ಯವಲ್ಲವೆ ಪ್ರಧಾನವಾದದ್ದು? ಪ್ರಕೃತದಲ್ಲಿ ಎಲ್ಲದಕ್ಕಿಂತಲೂ ಹೆಚ್ಚಾದ ಇಂಗ್ಲೀಷ್ ವೈದ್ಯಶಾಸ್ತ್ರವೇ ಸಾಕೆಂದು ನಮ್ಮವರು ಕೆಲವರು ತಿಳಿದುಕೊಂಡು ಇದ್ದಾರೆ. ಅದೂ ಅಲ್ಲದೆ ಇಂಗ್ಲೀಷ್ ಔಷಧ ಶಾಲೆಗಳನ್ನು ನಮ್ಮವರಲ್ಲಿ ಕೆಲವರು ದೊಡ್ಡ ಮನುಷ್ಯರುಗಳು ಅಲ್ಲಲ್ಲಿ ಸ್ಥಾಪಿಸಿ ಅಭಿವೃದ್ಧಿಗೆ ತಂದಿರುತ್ತಾರೆ. ಅದು ಯುಕ್ತವೇ ಸರಿ, ಆದಾಗ್ಯೂ ತಮ್ಮ ಪ್ರಾಚೀನ ವೈದ್ಯಶಾಸ್ತ್ರವನ್ನೂ ಮತ್ತು ಅದನ್ನು ತಿಳಿದಿರುವ ಪಂಡಿತರುಗಳ ಯೋಗ್ಯತೆಯನ್ನೂ ಅರಿ ಯದೆ ಇದ್ದಾರೆ. ವಿಚಾರಮಾಡಿದರೆ ತಿಳಿಯಬಹುದು.

ಹೀಗೆ ವಿಶೇಷವಾಗಿ ವಿಚಾರಿಸದೆ ಇರೋಣದರ ದೆಸೆ ಯಿಂದ ಅನ್ಯಾಸಕ್ತರಾದಂಥಾ ನಮ್ಮ ಜನಗಳು ಅವರಲ್ಲಿ ಎಷ್ಟು ಪ್ರೀತಿಯುಳ್ಳಂಥವರಾದಾಗ್ಯೂ ಸ್ವಶಾಸ್ತ್ರಜ್ಞಾನ ಸ್ವಲ್ಪವೂ ಇಲ್ಲ ದವರೆಂದು ಆ ಇಂಗ್ಲೀಷ್ ಜನಗಳಿಂದ ತಾವೇನೆ ದೂಷಿತರಾದ ವರು. ಇನ್ನು ನಮ್ಮವರ ಮಾತು ಯಾತಕ್ಕೆ ?"

ಅವರು ಈ ಮಾತುಗಳನ್ನು ಬರೆದು ಸುಮಾರು ನೂರು

ವರ್ಷಗಳಾದುವು. ಆದರೆ ಇಂದಿಗೂ ಆ ಮಾತುಗಳು ಒಪ್ಪು ತ್ತವೆ. ಪರಿಸ್ಥಿತಿ ಹೆಚ್ಚೂ ಕಡಮೆ ಹಾಗೆಯೇ ಇದೆ. 1868ರಲ್ಲಿ ಮೈಸೂರು ನಗರವು ಕಾಲರಾರೋಗಕ್ಕೆ ತುತ್ತಾಗಿ ತಲ್ಲಣಿಸು ತ್ತಿದ್ದಾಗ, ಭೀಮರಾಯರು ಅಧಿಕಾರಿಗಳೊಂದಿಗೆ ಗುದ್ದಾಡಿ ಆಯುರ್ವೇದ ಚಿಕಿತ್ಸೆಗೂ ಒಂದು ಅವಕಾಶವನ್ನು ಕಲ್ಪಿಸಿದರು. ಆಯುರ್ವೇದದ ಮದ್ದು ಸಾಂಕ್ರಾಮಿಕ ಜಾಡ್ಯವನ್ನು ತಡೆಗಟ್ಟ ಬಲ್ಲುದು ಎಂಬುದನ್ನು ತೋರಿಸಿಕೊಟ್ಟರು. ಆದರೇನಾಯಿತು ? ಅಂದಿನಿಂದ ಇಂದಿನವರೆಗೂ ಆ ಮದ್ದುಗಳನ್ನು ಕೇಳಿರುವವರು ಯಾರು ? ಬಳಸುವವರು ಯಾರು ?

ಸಂಸ್ಥಾನದ ಕಥೆಯೇ ಹೀಗಾದರೆ ಕರ್ನಾಟಕದ ಉಳಿದೆಡೆ ಆಯುರ್ವೇದಕ್ಕೆ ದೊರೆತ ಉತ್ತೇಜನ ಎಷ್ಟಿದ್ದೀತು? ಮುಂಬಯಿ, ಮದರಾಸು ಪ್ರಾಂತ್ಯಗಳಿಗೆ ಸೇರಿದ್ದ ಕನ್ನಡಭಾಗ ಗಳಲ್ಲಿ ಕೆಲವು ವೈದ್ಯಮನೆತನಗಳು ಆಯುರ್ವೇದವನ್ನು ಉಳಿಸಿ ಕೊಂಡಿದ್ದುವು ಅಷ್ಟೆ. ಸರಕಾರದಿಂದಾಗಲೀ ಅಧಿಕಾರಿಗಳಿಂದಾ ಗಲೀ ಮಹಾಜನರಿಂದಾಗಲೀ ಪ್ರೋತ್ಸಾಹ ದೊರೆಯುವಂತಿರ ಲಿಲ್ಲ. ಅಲ್ಲಿ ಆಯುರ್ವೇದಕ್ಕಾಗಿ ಹೆಣಗಾಡಿದವರು ಕೆಲವು ಪ್ರಬಲ ವ್ಯಕ್ತಿಗಳು. ಬೆಳಗಾವಿಯ ಹನುಮಂತರಾವ್, ವೆಂಕ ಟೇಶರಾವ್ ಸವಣೂರರು, ಬಿಜಾಪುರದ ಆದ್ಯ ಅನಂತಾ ಚಾರ್ಯರು ,ಮದ್ರಾಸಿನ ಜಿ. (ಗೊರೂರು) ಶ್ರೀನಿವಾಸಮೂರ್ತಿ ಯವರು, ಧಾರವಾಡದ ದಾಮೋದರ ಅನಂತ ಹಲಸೀಕರರು ಮತ್ತು ದತ್ತಾತ್ರೇಯ ಕೃಷ್ಣ ಭಾರದ್ವಾಜರು, ದಕ್ಷಿಣಕನ್ನಡ ಜಿಲ್ಲೆಯ ಎಂ. ಆರ್. ಭಟ್ಟರು, ಮಟ್ಟಿ ಗಣಪತಿ ಪ್ರಭುಗಳು, ಮೂಲ್ಕಿ ಗಣಪಯ್ಯಗಳು ಮತ್ತು ಪಾಣಾಜೆ ಶಂಕರನಾರಾಯಣ ಭಟ್ಟರು, ಉತ್ತರಕನ್ನಡ ಜಿಲ್ಲೆಯ ಕೃಷ್ಣ ಸುಬ್ಬಣ್ಣ ಭಟ್ಟರು, ನೀಲಕಂಠರಾವ್ ಪಟವರ್ಧನರು ಮತ್ತು ಅವರ ಮಗ ಗಣಪತಿ



ವೈದ್ಯರತ್ನ ಗೊರೂರು ಶ್ರೀನಿವಾಸಮೂರ್ತಿ ಅವರು



ಡಾ. ಹೆಚ್. ಎ. ಸವಣೂರ್ ಅವರು

ರಾಯರು ಮೊದಲಾದವರು ಆಯುರ್ವೇದ ಉಳಿಯಲು ನೆರವಾಗಿದ್ದಾರೆ.

ಪಂಡಿತ ತಾರಾನಾಥರು

ಕರ್ನಾಟಕದಲ್ಲಿ ಆಯುರ್ವೇದದ ಸ್ಥಿತಿಗತಿಗಳನ್ನು ಹೇಳುವಾಗ ಪಂಡಿತ ತಾರಾನಾಥರ ಹೆಸರು ದೊಡ್ಡದು. ತಾರಾನಾಥರು (1891–1942) ಮಂಗಳೂರಿನಲ್ಲಿ ಹುಟ್ಟಿ, ಹೈದರಾಬಾದಿನಲ್ಲಿ ಕಲಿತು, ರಾಯಚೂರಿನಲ್ಲಿ ವೃತ್ತಿಯನ್ನಾರಂಭಿಸಿ, ತುಂಗಭದ್ರೆಯಲ್ಲಿ ನೆಲೆಸಿ, ಬೆಂಗಳೂರಿನಲ್ಲಿ ತೀರಿಕೊಂಡರು. ಅವರ ಪ್ರತಿಭೆ ಮತ್ತು ಪ್ರಭಾವ ಇಷ್ಟೂಹರವನ್ನೊಳಗೊಂಡಿವೆ. ಅವರ 'ಪ್ರೇಮಾಯತನ'ದ ಕರೆ ನಾಡಿನಲ್ಲೆಲ್ಲ ಮೊಳಗಿತು. ದೇಶದ ಸ್ವಾತಂತ್ರ್ಯ, ನಾಡಿನ ಹಿರಿಮೆ, ಆಧ್ಯಾತ್ಮಿಕ ಹಂಬಲ ಇವು ಮೂರೂ ಅವರ ಚೇತನಕ್ಕೆ ಪುಟವಿಟ್ಟುವು, ಅವರ ವ್ಯಕ್ತಿತ್ವಕ್ಕೆ ಕಾವು ಕೊಟ್ಟುವು. ಅವರ ಮೋಹಕವಾದ ಮಾತು, ಹರಿತವಾದ ಬರಹ, ಪ್ರಚೋದಕವಾದ ವಿಚಾರ ಅವರಿಗೆ ಜನಪ್ರೀತಿಯನ್ನೂ ತಂದುವು, ಆಳರಸರಿಂದ ತೊಂದರೆಗಳನ್ನೂ ಒದಗಿಸಿದುವು.

ಅವರದ್ದು ಬಹುಮುಖವಾದ ಪ್ರತಿಭೆ. ಸಂಗೀತ,ಸಾಹಿತ್ಯ, ಮಂತ್ರ, ತಂತ್ರ, ಯೋಗ, ವೈದ್ಯ, ವೇದಾಂತ ಎಲ್ಲದರಲ್ಲೂ ಅವರದ್ದು ಎತ್ತಿದ ಕೈ. ಆದರೆ ಅವರು ಬಾಳುವೆಯುದ್ದಕ್ಕೂ ಮುಖ್ಯವಾಗಿ ನಡೆಸಿಕೊಂಡು ಬಂದುದು ವೈದ್ಯವನ್ನು. ಅವರು ತುಂಗಭದ್ರಾತೀರದಲ್ಲಿ ನೆಲೆಸಿ 'ಪ್ರೇಮಾಯತನ'ವನ್ನು ಹೂಡಿ, ವೈದ್ಯಶಾಲೆಯನ್ನೂ ವೈದ್ಯವಿದ್ಯಾಪೀಠವನ್ನೂ ಏರ್ಪಡಿಸಿಕೊಂಡುದು 1920ರ ಸುಮಾರಿಗೆ. ಆಯುರ್ವೇದ ಶಿಕ್ಷಣದ ಬಗ್ಗೆ ಆಳವಾಗಿ



ಪಂಡಿತ ತಾರಾನಾಥ್ ಅವರು

ವಿಚಾರಮಾಡಿ ಶಿಕ್ಷಣದ ಕ್ರಮವನ್ನು ಖಚಿತಗೊಳಿಸಿದ ಸಾಹಸ ಅವರದ್ದು. ಅವರು ವೈದ್ಯದಲ್ಲೂ ಕುಶಲರಾಗಿದ್ದು ವಿದ್ಯಾವಿತರಣದಲ್ಲೂ ಸಮರ್ಥರಾಗಿದ್ದುದರಿಂದ ಹಲವಾರು ಪ್ರತಿಭಾಶಾಲಿಗಳು ಅವರನ್ನು ಸೇರುವಂತಾಯಿತು. ಅವರದ್ದೇ ಒಂದು ಪರಂಪರೆ ಸಿದ್ಧವಾಯಿತು;ಇಂದಿಗೂ ಕನ್ನಡನಾಡಿನಲ್ಲಿ ಈ ಪರಂಪರೆಗೆ ಸೇರಿದವರು ಆಯುರ್ವೇದದ ಹೆಗ್ಗಳಿಕೆಗೆ ಹೆಣಗಾಡುತ್ತಿದ್ದಾರೆ.

ತಾರಾನಾಥರ ಬಳಿ ಕಲಿತು ಹಿರಿಯರಾದವರಲ್ಲಿ ದತ್ತಾತ್ರೇಯ ಕೃಷ್ಣಭಾರದ್ವಾಜರು, ದಾಮೋದರ ಅನಂತ ಹಲಸೀಕರರು, ಎಂ.ಆರ್. ಭಟ್ಟರು, ಕೃಷ್ಣ ಸುಬ್ಬಣ್ಣ ಭಟ್ಟರು, ಮಳಿಯೆ ಗೋಪಾಲಕೃಷ್ಣರಾಯರು, ರಾಯಚೂರು ಸ್ವಾಮಿರಾಯಾಚಾರ್ಯರು ಮೊದಲಾದವರು ಸೇರುತ್ತಾರೆ. ಬಳ್ಳಾರಿಯ 'ತಾರಾನಾಥ ಆಯುರ್ವೇದ ವಿದ್ಯಾಪೀಠ' (ಸ್ವಾಮಿರಾಯಾಚಾರ್ಯರು ಸ್ಥಾಪಿಸಿದ್ದು), ಚಿಕ್ಕಮಗಳೂರಿನ 'ತಾರಾನಾಥ ರಸೌಷಧಿ ವರ್ಕ್ಸ್' (1946ರಲ್ಲಿ ಎಂ. ಆರ್. ಭಟ್ಟರು ಮತ್ತಿತರರು ಸ್ಥಾಪಿಸಿದ್ದು), ಬೆಂಗಳೂರಿನ 'ರಾಮಕೃಷ್ಣ ವಿದ್ಯಾಪೀಠ' (1938ರಲ್ಲಿ ದತ್ತಾತ್ರೇಯ ಕೃಷ್ಣ ಭಾರದ್ವಾಜರು ಸ್ಥಾಪಿಸಿದ್ದು) ಮತ್ತು 'ಆಯುರ್ವೇದ ಪ್ರತಿಷ್ಠಾನ' (1956ರಲ್ಲಿ ಗೋಪಾಲಕೃಷ್ಣರಾಯರು ಸ್ಥಾಪಿಸಿದ್ದು) ಇವೆಲ್ಲ ತಾರಾನಾಥರ ಸ್ಮರಣೆಯನ್ನು ಉಳಿಸಿವೆ. ಆಯುರ್ವೇದ ಶಿಕ್ಷಣ ಮತ್ತು ಔಷಧಿಗಳ ನಿರ್ಮಾಣ ಎರಡೂ ಕ್ಷೇತ್ರಗಳಲ್ಲಿ ತಾರಾನಾಥರ ಪ್ರಭಾವ ಮೂರ್ತಿಮತ್ತಾಗಿದೆ.

ಪಂಡಿತ ತಾರಾನಾಥರ ಗೆಳೆಯರ ಬಳಗದಲ್ಲಿ ಹೆಸರಾದವರು ದತ್ತಾತ್ರೇಯ ಕೃಷ್ಣ ಭಾರದ್ವಾಜರು (1891–1953). ಹುಟ್ಟು ಧಾರವಾಡದಲ್ಲಿ ; ಕಲಿಕೆ ಪುಣೆ, ಕಾಶಿ, ಮದ್ರಾಸುಗಳಲ್ಲಿ; ಅಧ್ಯಾಪಕ ವೃತ್ತಿ ಪುಣೆಯ ಟಿಳಕ ಮಹಾವಿದ್ಯಾಲಯದಲ್ಲಿ:

ನೆಲೆಸಿದ್ದು ಬೆಂಗಳೂರಿನಲ್ಲಿ. ಮೊದಲ ಅಧ್ಯಯನವೆಲ್ಲ ಸಂಸ್ಕೃತ ಸಾಹಿತ್ಯ; ಎಳೆತನದಲ್ಲಿಯೇ ಸ್ವಾತಂತ್ರ್ಯಸಮರದಲ್ಲಿ ಒಡನಾಟ; ತಾರಾನಾಥರ ಸಂಪರ್ಕ ಒದಗಿದ ಮೇಲೆ ಆಯುರ್ವೇದದಲ್ಲಿ ವ್ಯವಸಾಯ, ಮುಂದೆ ವೈದ್ಯ, ಬರಹ, ಸಮಾಜ ಸುಧಾರಣೆ ಗಳಲ್ಲೇ ಬಾಳನ್ನು ಸವೆಸಿದರು. ಕನ್ನಡನಾಡಿನಲ್ಲಿ ಆಯುರ್ವೇದದ ಹಿರಿಮೆ ಜನರಿಗೆ ಮನದಟ್ಟಾಗುವಂತೆ ಮಾಡಿದವರಲ್ಲಿ ತಾರಾ ನಾಥರು, ಭಾರದ್ವಾಜರು, ಗೋಪಾಲಕೃಷ್ಣರಾಯರು ಪ್ರಮುಖರು.

ತಾರಾನಾಥರ ಶಿಷ್ಯರಲ್ಲಿ ಮುಖ್ಯರಾದ ಎಂ.ಆರ್. ಭಟ್ಟರು (1895–1959) ಮಂಗಳೂರಿನಲ್ಲಿ ತಮ್ಮ ವೈದ್ಯಶಾಲೆಯನ್ನು ನಡೆಸುತ್ತ, ಚಿಕ್ಕಮಗಳೂರಿನ ರಸೌಷಧಿ ಸಂಸ್ಥೆಯನ್ನು ನೋಡಿ ಕೊಳ್ಳುತ್ತ, ಆಯುರ್ವೇದ ಗ್ರಂಥ ರಚನೆಮಾಡುತ್ತ ಬಾಳನ್ನು ಕಳೆದರು. ಇನ್ನೊಬ್ಬ ಶಿಷ್ಯರಾದ ಕೃಷ್ಣ ಸುಬ್ಬಣ್ಣ ಭಟ್ಟರು ದೇಶದ ಸ್ವಾತಂತ್ರ್ಯಸಮರದಲ್ಲಿ ಪಾಲ್ಗೊಂಡಿದ್ದು, ಸಿರ್ಸಿ ಯಲ್ಲಿಯೂ ಚಿಕ್ಕಮಗಳೂರಿನಲ್ಲಿಯೂ ಔಷಧಿ ನಿರ್ಮಾಣದಲ್ಲಿ ತೊಡಗಿದ್ದು, ಆಯುರ್ವೇದ ವಿದ್ಯಾಸಂಸ್ಥೆಯನ್ನು ವ್ಯವಸ್ಥೆ ಮಾಡಿ ಗ್ರಂಥರಚನೆಗಳನ್ನು ಮಾಡಿದ್ದಾರೆ. ಮಳಿಯೆ ಗೋಪಾಲಕೃಷ್ಣ ರಾಯರು ತಾರಾನಾಥರ ಪಟ್ಟಶಿಷ್ಯ. ಗುರುಗಳಂತೆಯೇ ಇವ ರದ್ದೂ ಬಹುಮುಖ ಪ್ರತಿಭೆ. ಮಾತು, ಬರಹ, ವೈದ್ಯ, ಶಿಕ್ಷಣ ಎಲ್ಲದರಲ್ಲೂ ಕುಶಲರು; ನಿರ್ಭಯ, ನಿಷ್ಠುರ, ಸ್ವತಂತ್ರವೃತ್ತಿ ಯುವರು. 'ಕಲಿಯುಗ'ವೆಂಬ ಮಾಸಿಕವನ್ನು ಇಪ್ಪತ್ತೈದು ವರ್ಷಗಳ ಕಾಲ ನಡೆಯಿಸಿ ತಾರಾನಾಥರು ಕೈಗೊಂಡಿದ್ದ ಕೆಲಸವನ್ನು ಮುಂದುವರಿಸಿದರು. ಹಲವಾರು ಗ್ರಂಥಗಳನ್ನು ಬರೆದು ಆಯುರ್ವೇದದ ಸಿದ್ಧಾಂತವನ್ನು ಕನ್ನಡಿಗರಲ್ಲಿ ಹರ ಡಿದ್ದಾರೆ; 'ದೀರ್ಘಾಯು'ವೆಂಬ ಆರೋಗ್ಯ ಮಾಸಪತ್ರಿಕೆ



ದ. ಕೃ. ಭರದ್ವಾಜರು

ಯನ್ನು ಇಂದಿಗೂ ನಡೆಸುತ್ತಿದ್ದಾರೆ. 'ಆಯುರ್ವೇದ ಪ್ರತಿಷ್ಠಾನ' ವೆಂಬ ವೈದ್ಯವಿದ್ಯಾಸಂಸ್ಥೆಯನ್ನು ಇಪ್ಪತ್ತೈದು ವರ್ಷಗಳ ಹಿಂದೆ ಏರ್ಪಡಿಸಿಕೊಂಡು ತಮ್ಮ ಎಪ್ಪತ್ತೈದರ ಇಳಿವಯಸ್ಸಿನಲ್ಲೂ ಅಚ್ಚುಕಟ್ಟಾಗಿ ನಿರ್ವಹಿಸಿಕೊಂಡು ಬರುತ್ತಿದ್ದಾರೆ. ಆದರ್ಶವಾದಿಗಳಾದ ಇವರು ಉಚಿತ ವೈದ್ಯಶಾಲೆಯನ್ನೂ ನಡೆಸುತ್ತಿರುವರು.

ಆಯುರ್ವೇದ ಪ್ರಚಾರ

ಆಯುರ್ವೇದವು ಜನಪ್ರಿಯವಾಗಲು ಎರಡು ದಾರಿಗಳು –ಗ್ರಂಥ ರಚನೆ, ಔಷಧಿಗಳ ಸಿದ್ಧತೆ ಮತ್ತು ವಿತರಣೆ. ಕನ್ನಡ

ನಾಡಿನಲ್ಲಿ ಆಯುರ್ವೇದದ ಮೌಲಿಕ ಗ್ರಂಥಗಳನ್ನು ಕನ್ನಡಕ್ಕೆ ಅನುವಾದಮಾಡುವ ಕೆಲಸ ಸುಮಾರಾಗಿ ನಡೆದಿದೆ. ಪಣಂಬೂರು ರಾಮಕೃಷ್ಣಯ್ಯನವರು (ಆಯುರ್ವೇದ ಸಾರ), ಎನ್. ಲಕ್ಷ್ಮೀನರಸಿಂಹ ಭಟ್ಟಾಚಾರ್ಯರು (ಅಷ್ಟಾಂಗ ಹೃದಯ, ಸುಶ್ರುತ ಸಂಹಿತೆ, ಚರಕ ಸಂಹಿತೆ ಇತ್ಯಾದಿ), ಪಟ್ಣಗೆರೆ ಸೂರ್ಯನಾರಾಯಣ ಶಾಸ್ತ್ರಿಯವರು (ಶಾರ್ಙ್ಗಧರಸಂಹಿತೆ, ಮಾಧವ ನಿದಾನ), ಆದ್ಯ ಅನಂತಾಚಾರ್ಯರು (ಚರಕಸಂಹಿತೆ, ಅಷ್ಟಾಂಗ ಹೃದಯ ಇತ್ಯಾದಿ), ದಾಮೋದರ ಅನಂತ ಹಲಸೀಕರರು (ಮಾಧವನಿದಾನ, ಶಾರೀರ ವಿಜ್ಞಾನ, ಶಾರ್ಙ್ಗಧರ ಸಂಹಿತೆ, ಮದನಪಾಲ ನಿಘಂಟು ಇತ್ಯಾದಿ), ಎಂ. ಆರ್. ಭಟ್ಟರು(ಸಹಸ್ರ ಪ್ರಯೋಗ, ಧನ್ವಂತರಿ ಸಂಹಿತಾ,ವೈದ್ಯಮನೋರಮಾ ಇತ್ಯಾದಿ), ಕೃಷ್ಣಸುಬ್ಬಣ್ಣ ಭಟ್ಟರು (ಆಸವಾರಿಷ್ಟ ವಿಜ್ಞಾನಸಂಗ್ರಹ, ಸಿದ್ಧ ಯೋಗ ಸಂಗ್ರಹ) ಮೊದಲಾದವರ ಸಾಹಸವನ್ನು ಸ್ಮರಿಸಬೇಕು.

ಮೌಲಿಕಗ್ರಂಥಗಳಲ್ಲದೆ ಜನರಿಗೆ ಉಪಯುಕ್ತವಾಗುವಂಥ ಸಂಗ್ರಹಗ್ರಂಥಗಳೂ ಕನ್ನಡದಲ್ಲಿ ಬಂದಿವೆ. ಹಳೆಯ ಕಾಲದ ಹಲವು ಗ್ರಂಥಗಳನ್ನು ಬಿಟ್ಟರೆ, ಈಚೆಗೆ ಚಂದ್ರಭಾನ ಸಿಂಗ್ ಮತ್ತು ಶಿಂಗ್ರೈಯ್ಯಂಗಾರ್ಯರ 'ಆಯುರ್ವೇದದ ಸುಲಭ ಚಿಕಿತ್ಸೆಗಳು', ಪಾಣಾಜೆ ಶಂಕರನಾರಾಯಣ ಭಟ್ಟರ 'ಆರೋಗ್ಯ ಸಾಧನೆ' ಮತ್ತು 'ಅಜ್ಜಿ ಮದ್ದು', ಹನುಮಂತರಾವ್ ಸವಣೂರರ 'ಹ್ಯಾಂಡ್‌ಬುಕ್ ಆಫ್ ಆಯುರ್ವೇದಿಕ್ ಮೆಟೀರಿಯಾ ಮೆಡಿಕಾ', ಆದ್ಯ ಅನಂತಾಚಾರ್ಯರ 'ಗೃಹವೈದ್ಯಕ', ತಾರಾನಾಥರ 'ಸುಲಭ ಚಿಕಿತ್ಸೆಗಳು', ಮಳಿಯೆ ಗೋಪಾಲಕೃಷ್ಣ ರಾಯರ 'ಬಡವರ ವೈದ್ಯ' ಮೊದಲಾದುವು; ತರೀಕೆರೆಯ ವೆಂಕಟಕೃಷ್ಣಯ್ಯನವರ 'ಸಚಿತ್ರ ಮೂಲಿಕಾ ವೈದ್ಯ ಪ್ರಕಾಶಿಕೆ' ಮತ್ತು 'ಸುಲಭ ಚಿಕಿತ್ಸೆ', ವೆಂಕಟೇಶ ಪಂಡಿತರ 'ನಿಘಂಟು',

ಶಿವಕುಮಾರಸ್ವಾಮಿಗಳ 'ಆರೋಗ್ಯದರ್ಪಣ', ಗುಂಡಾಚಾರ್ಯ ಸವಣೂರರ 'ತ್ರಿದೋಷ ವಿಜ್ಞಾನ' ಮತ್ತು 'ಬಾಣಂತಿ ಉಪಚಾರ', ಮಲ್ಲಾಡಿಹಳ್ಳಿ ರಾಘವೇಂದ್ರ ಸ್ವಾಮಿಗಳ 'ಸ್ವಯಂ ವೈದ್ಯ', ಸಿ. ಬಿ. ಪುರಾಣಿಕರ 'ಹಿತ್ತಲಗಿಡಮದ್ದು', ಕೆ. ಆರ್. ಶ್ರೀಕಂಠಮೂರ್ತಿಗಳ 'ಕರ್ನಾಟಕದಲ್ಲಿ ಆಯುರ್ವೇದ ಇತಿಹಾಸ' ಮೊದಲಾದುವು ಜನಪ್ರಿಯವಾಗಿವೆ.

ಆಯುರ್ವೇದದ ತತ್ತ್ವಗಳನ್ನೂ ಚಿಕಿತ್ಸೆಗಳನ್ನೂ ಜನರಿಗೆ ತಿಳಿಯಪಡಿಸಲೆಂದು ಕನ್ನಡದಲ್ಲಿ ಹಲವು ಪತ್ರಿಕೆಗಳು ಮೈದಳೆದುವು. ಆದರೆ ಬಹುಮಟ್ಟಿಗೆ ಇವೆಲ್ಲ ಅಲ್ಪಾಯುಗಳಾದುವು. ವೆಂಕಟೇಶಪಂಡಿತರು ಬೆಂಗಳೂರಿನಿಂದ 'ವೈದ್ಯಸಿಂಧು'ವೆಂಬ ಮಾಸಪತ್ರಿಕೆಯನ್ನು 1906ರಿಂದ 1918ರವರೆಗೂ ಹೊರ ತಂದರು. ಶೃಂಗೇರಿಯ ಶೇಷಶಾಸ್ತ್ರಿಯವರು 'ಧನ್ವಂತರಿ'ಯನ್ನು 1920ರಲ್ಲಿ ಮೊದಲು ಮಾಡಿ ನಾಲ್ಕು ವರ್ಷಗಳ ಕಾಲ ನಡೆಸಿದರು. ಇದೇ ಹೆಸರಿನ ಇನ್ನೊಂದು ಮಾಸಿಕ ಆದ್ಯ ಅನಂತಾಚಾರ್ಯರ ಸಂಪಾದಕತ್ವದಲ್ಲಿ 1918ರಲ್ಲಿ ಆರಂಭವಾಯಿತು. ದಾಮೋದರ ಹಲಸೀಕರರ 'ಆರ್ಯವೈದ್ಯ' ಕೆಲವು ವರ್ಷಗಳು ಬಾಳಿತು. ಮಳಿಯೆ ಗೋಪಾಲಕೃಷ್ಣರಾಯರು 1954ರಲ್ಲಿ ಆರಂಭಮಾಡಿದ 'ದೀರ್ಘಾಯು' ಮತ್ತು ಕುಲಕರ್ಣಿ ಜಿನರಾಳರರು ಮರುವರ್ಷ ಶುರುಮಾಡಿದ 'ಭಿಷಗ್ವರ' ಎರಡೂ ಇನ್ನೂ ಜೀವಂತವಾಗಿವೆ.

ಆಯುರ್ವೇದದ ಪ್ರಚಾರಕ್ಕೂ ಆಯುರ್ವೇದ ವೈದ್ಯರ ಸಂಘಟನೆಗೂ ಕೆಲವು ಸಂಸ್ಥೆಗಳು ಟೊಂಕಕಟ್ಟಿ ನಿಂತುವು. ಇವುಗಳಲ್ಲಿ ಪ್ರಮುಖವಾದುದೆಂದರೆ ಬೆಳಗಾವಿಯಲ್ಲಿ 1924 ರಷ್ಟು ಹಿಂದೆಯೇ ಮೊದಲಾದ 'ಅಖಿಲ ಕರ್ನಾಟಕ ಆಯುರ್ವೇದ ಮಂಡಲ'. ಇದು 1913ರಲ್ಲಿ ಶಂಕರ ದಾಜಿ ಶಾಸ್ತ್ರಿ

ಶೃಂಗೇರಿ ಶೇಷಶಾಸ್ತ್ರಿಗಳು

ಪಾದೆಯುವರ ಸಾಹಸದಿಂದ ಪ್ರವೃತ್ತವಾದ ಅಖಿಲ ಭಾರತ ವರ್ಷೀಯ ಆಯುರ್ವೇದ ಮಹಾಸಮ್ಮೇಳನದ ಅಂಗವಾಗಿ ಆರಂಭವಾಯಿತು. ಇದರ ಹುಟ್ಟಿಗೂ ಬೆಳವಣಿಗೆಗೂ ಹನು ಮಂತರಾವ್ ಸವಣೂರರ ಅವಿರತ ದುಡಿಮೆ ಸಂದಿತು. ಅವರಿಗೆ ಈ ಕೆಲಸದಲ್ಲಿ ನೆರವಾಗಿ ನಿಂತವರು ಶೃಂಗೇರಿಯ ಶೇಷಶಾಸ್ತ್ರಿ ಗಳು. ಬೆಳಗಾವಿಯ ಸವಣೂರರು (1879–1953) ಮೊದಲಿಗೆ ಆಯುರ್ವೇದ ವೈದ್ಯರಲ್ಲ; ಐರೋಪ್ಯ ವೈದ್ಯದಲ್ಲೇ ಪದವಿ

ಯನ್ನು ಪಡೆದು ಅದನ್ನೇ ಅಭ್ಯಾಸಮಾಡುತ್ತಿದ್ದವರು. ಆದರೆ ಮನೆತನದಲ್ಲಿ ಬಂದಿದ್ದ ಆಯುರ್ವೇದ ಅವರ ಆಸಕ್ತಿಯನ್ನು ಸೆಳೆಯಿತು. ಬರುಬರುತ್ತ ಅದಕ್ಕೇ ಒಲಿದು ಅದರ ಏಳಿಗೆಗಾಗಿಯೇ ತಮ್ಮ ಬಾಳನ್ನು ಮುಡಿಪಿಟ್ಟರು. ಇವರು 'ಆಯುರ್ವೇದೋತ್ತೇಜಕಸಭೆ'ಯನ್ನು ಸ್ಥಾಪಿಸಿಕೊಂಡು ಗ್ರಂಥ ರಚನೆಗೂ ಆಯುರ್ವೇದ ಶಿಕ್ಷಣಕ್ಕೂ ತೊಡಗಿದರು. ದೇಶೀಯ ವೈದ್ಯರ ದುಃಸ್ಥಿತಿಯನ್ನು ಕಂಡು ಮರುಗಿ ಅವರಿಗೆ ಧೈರ್ಯವನ್ನೂ, ದಾರಿಯನ್ನೂ ತೋರಿಸಲೆಂದು 'ಕರ್ನಾಟಕ ಆಯುರ್ವೇದ ಮಂಡಲ'ವನ್ನು ರೂಪುಗೊಳಿಸಿದರು. ಇದರ ಮೊದಲ ಕಾರ್ಯದರ್ಶಿಗಳಾಗಿ ಶೃಂಗೇರಿಯ ಶೇಷಶಾಸ್ತ್ರಿಗಳು (1889-1930) ಸೇವೆ ಸಲ್ಲಿಸಿದರು.

ಮೈಸೂರು ಇನ್ನೂ ದೇಶೀಯ ಸಂಸ್ಥಾನವಾಗಿದ್ದಾಗ ಮೈದಳೆದಿದ್ದ 'ಅಖಿಲ ಮೈಸೂರು ಆಯುರ್ವೇದಿಕ್ ಕಾಂಗ್ರೆಸ್', 1955ರಲ್ಲಿ ಈ ಮಂಡಲದೊಂದಿಗೆ ಒಂದುಗೂಡಿ 'ಕರ್ನಾಟಕ ಪ್ರಾದೇಶಿಕ ಆಯುರ್ವೇದ ಮಂಡಲ'ವಾಗಿ ಮೈದಳೆಯಿತು. ಆ ವೇಳೆಗಾಗಲೇ ಮಂಡಲವು ಹತ್ತೊಂಬತ್ತು ಸಮ್ಮೇಳನಗಳನ್ನು ಬೆಳಗಾವಿ, ಬಿಜಾಪುರ, ಮಂಗಳೂರು, ಧಾರವಾಡ, ಶಿವಮೊಗ್ಗ, ರಾಯಚೂರು, ಸಿರಸಿ, ಮೈಸೂರು, ಮೊದಲಾದೆಡೆ ಸೊಗಸಾಗಿ ನಡೆಸಿದ್ದಿತು. ಮುಂದೆ ಇನ್ನಷ್ಟು ಗರಿಗೆದರಿ ಹಾರ ತೊಡಗಿತು. ಈ ಮಂಡಲವು ಆಯುರ್ವೇದ ವೈದ್ಯರ ಅರಿವನ್ನು ಹೆಚ್ಚಿಸಲು, ವೈದ್ಯರನ್ನು ಒಂದೆಡೆ ಕೂಡಿಸಲು, ಅವರ ಸಮಸ್ಯೆಗಳನ್ನು ತೀರಿಸಲು ತಕ್ಕಮಟ್ಟಿಗೆ ನೆರವಾಯಿತು.

ಮಂಡಲದ ಸಮ್ಮೇಳನಗಳಲ್ಲಿ ತಪ್ಪದೆ ಪಾಲ್ಗೊಂಡು ಅದರ ಕಳೆಯನ್ನು ಹೆಚ್ಚಿಸಿದ ಇಬ್ಬರು ಮಹನೀಯರೆಂದರೆ ಕ್ಯಾಪ್ಟನ್ ಗೋರೂರು ಶ್ರೀನಿವಾಸ ಮೂರ್ತಿ ಮತ್ತು ಆಚಂಟ

ಲಕ್ಷ್ಮೀಪತಿ. ಇಬ್ಬರೂ ಆಯುರ್ವೇದ ವೈದ್ಯರಲ್ಲ; ಪಾಶ್ಚಾತ್ಯ ಪದ್ಧತಿಯ ವೈದ್ಯರೇ. ಇಬ್ಬರೂ ಆಯುರ್ವೇದ ವೈದ್ಯವನ್ನು ಮನಸಾರೆ ಮೆಚ್ಚಿಕೊಂಡು ಅದನ್ನು ಮೇಲೆ ತರುವ ಸಲುವಾಗಿ ಎಡೆಬಿಡದೆ ದುಡಿದರು. ಶ್ರೀನಿವಾಸಮೂರ್ತಿ (1887-1960) ಕನ್ನಡಿಗರಾದರೂ ಮದ್ರಾಸಿನಲ್ಲೇ ನೆಲೆಸಿದ್ದರು; ತುಂಬ ಪ್ರಭಾವಶಾಲಿಗಳಾಗಿದ್ದವರು, ಭಾರತ ಸರಕಾರವೇ ಅವರಿಗೆ 1939ರಲ್ಲಿ 'ವೈದ್ಯರತ್ನಂ' ಎಂಬ ಪ್ರಶಸ್ತಿಯನ್ನು ನೀಡಿದ್ದಿತು. ಮದ್ರಾಸಿನಲ್ಲಿ ಬೃಹದಾಕಾರವಾಗಿ ಬೆಳೆದಿರುವ 'ಭಾರತೀಯ ವೈದ್ಯರ ಸಹಕಾರ ಔಷಧಿ ನಿರ್ಮಾಣ ಸಂಸ್ಥೆ' (IMPCOPS) ಅವರ ಸಾಹಸದ ಫಲವೇ. ಇದರ ಅಂಗವಾಗಿ ಈಗ ಸಂಶೋಧ ನಾಲಯವೂ ಒಂದಿದೆ. ಆಚಂಟ ಲಕ್ಷ್ಮೀಪತಿ ಆಂಧ್ರ ಪ್ರದೇಶ ದವರು; ಮದ್ರಾಸಿನಲ್ಲೇ ಪ್ರಖ್ಯಾತರಾದರು. ಆಯುರ್ವೇದ ವನ್ನು ಕುರಿತು ಇಂಗ್ಲೀಷಿನಲ್ಲಿ ಪುಸ್ತಕಗಳನ್ನು ಬರೆದ ಮೊದಲಿಗ ರಲ್ಲಿ ಒಬ್ಬರು ಇವರು. ಇವರಿಬ್ಬರೂ ಕರ್ನಾಟಕ ಆಯುರ್ವೇದ ಮಂಡಲದ ಕೆಲಸದಲ್ಲಿ ತುಂಬ ನೆರವಾದರು.

ಈ ಮಂಡಲದ ಕೆಲಸದಲ್ಲಿ ಸವಣೂರರಿಗೆ ಬೆಂಬಲವಾಗಿ ಆಯುರ್ವೇದ ವೈದ್ಯರಾದ ವೈ. ಲಕ್ಷ್ಮೀನರಸಿಂಹಶಾಸ್ತ್ರಿಗಳು, ಮಂಗಳೂರಿನ ಎಂ. ವಿ. ಶಾಸ್ತ್ರಿಗಳು, ಬಿಜಾಪುರದ ಆದ್ಯ ಅನಂತಾ ಚಾರ್ಯರು, ಧಾರವಾಡದ ದಾಮೋದರ ಹಲಸೀಕರರು, ಮೈಸೂರಿನ ಕೆ. ಪಿ. ಪುರಾಣಿಕರು, ಬಿಜಾಪುರದ ಎಸ್. ಆರ್. ಹಿರೇಮಠರು, ಉಡುಪಿಯ ಎನ್. ವಿ. ಉಪಾಧ್ಯಾಯರು ಮೊದಲಾದವರು ಕೆಲಸ ಮಾಡಿದರು. ಐರೋಪ್ಯಪದ್ಧತಿಯ ವೈದ್ಯರಾಗಿದ್ದ ಸಿ.ಬಿ.ರಾಮರಾಯರು, ಎಸ್.ವೆಂಕೋಬರಾಯರು ಮೊದಲಾದವರು ಕೂಡ ಆಯುರ್ವೇದದ ಹಿರಿಮೆಯನ್ನು ಮನಗಂಡು ಮಂಡಲದ ಕೆಲಸದಲ್ಲಿ ಪಾಲ್ಗೊಂಡರು.



ಡಾ. ಲಕ್ಷ್ಮೀಪತಿ ಅವರು

ಔಷಧಿ ಉದ್ಯಮ

ಅಭ್ಯಾಸಮಾಡುವ ವೈದ್ಯರಿಗೆ ಔಷಧಿ ದೊರೆಯದಿದ್ದರೆ ಹೇಗೆ? ಆಯುರ್ವೇದದ ಔಷಧಿಗಳನ್ನು ಬಹುಮಟ್ಟಿಗೆ ವೈದ್ಯರೇ ತಯಾರಿಸಿಕೊಳ್ಳುವುದು ಹಿಂದಿನಿಂದ ಬಂದ ಪದ್ಧತಿ. ಆದರೆ ಕಾಲ ಮಾರ್ಪಟ್ಟು ಇದು ಶಕ್ಯವಲ್ಲದಿದ್ದಾಗ ಔಷಧಿಗಳನ್ನು ದೊಡ್ಡಪ್ರಮಾಣದಲ್ಲಿ ತಯಾರಿಸಿ ವೈದ್ಯರಿಗೆ ಒದಗಿಸುವ ಏರ್ಪಾಟು ಅನಿವಾರ್ಯವಾಗುತ್ತದೆ. ಮೌಲಿಕವಾದ ಶಾಸ್ತ್ರ, ಸಂಹಿತೆಗಳಲ್ಲಿ ಹೇಳಿರುವಂತೆಯೇ ಔಷಧಿಗಳನ್ನು ಸಿದ್ಧಪಡಿಸುವುದು ಕಷ್ಟದ ಕೆಲಸ; ವ್ಯಕ್ತಿಗಳಿಗೆ ಸಾಧ್ಯವಾಗದು. ಈ ಕೊರತೆಯನ್ನು ನೀಗಿಸಲು ಕಲ್ಕತ್ತಾ, ಬರೋಡ, ಅಹಮದ್‌ನಗರ, ಪುಣೆ, ಮುಂಬಯಿ, ಮದ್ರಾಸು ಮೊದಲಾದೆಡೆಗಳಲ್ಲಿ ಔಷಧಿ ನಿರ್ಮಾಣಸಂಸ್ಥೆಗಳು ಮೊದಲಾಗಿದ್ದುವು.

ಕನ್ನಡನಾಡಿನಲ್ಲಿ ಈ ಉದ್ಯಮವನ್ನು ಮೊದಲು ಆರಂಭಿಸಿದವರು ಮಂಗಳೂರಿನ ಮಟ್ಟಿ ಗಣಪತಿ ಪ್ರಭುಗಳು. ಅವರ ಔಷಧಾಲಯ 1882ರಲ್ಲಿ ಮೈದಳೆದು ಇಂದಿಗೂ ನಡೆಯುತ್ತಿದೆ. ಮೈಸೂರಿನಲ್ಲಿ ಪುಟ್ಟುಸ್ವಾಮಿ ಪಂಡಿತರ ಬಳಿ ಆಯುರ್ವೇದವನ್ನು ಕಲಿತು ದೇಶಾದ್ಯಂತ ಪ್ರಖ್ಯಾತಿಯನ್ನು ಪಡೆದ ದೀವಿ ಗೋಪಾಲಾಚಾರ್ಯರು (1872 – 1920) ಆಂಧ್ರಪ್ರದೇಶದವರು : ಇವರು ಮದ್ರಾಸಿನಲ್ಲಿ ನೆಲೆಸಿ 1898 ರಲ್ಲಿ 'ಆಯುರ್ವೇದಾಶ್ರಮ' ವೆಂಬ ಸಂಸ್ಥೆಯನ್ನು ಕಟ್ಟಿಕೊಂಡು ಕೆಲವು ವಿಶಿಷ್ಟವಾದ ಆಯುರ್ವೇದ ಔಷಧಿಗಳನ್ನು ಶಾಸ್ತ್ರೋಕ್ತವಾಗಿ ತಯಾರಿಸಲು ಮೊದಲಿಟ್ಟರು. ಕನ್ನಡನಾಡಿನ ವೈದ್ಯರಿಗೆ ಈ ಸಂಸ್ಥೆಯಿಂದ ತುಂಬ ಉಪಕಾರವಾಯಿತು.

ದೊಡ್ಡಪ್ರಮಾಣದಲ್ಲಿ ಎಲ್ಲ ಔಷಧಿಗಳನ್ನೂ ತಯಾರಿಸಿ,

ವಿತರಣ ಮಾಡುವ ಉದ್ಯಮ ಈ ಕಡೆ ಮೊದಲು ಹೆಸರಾದದ್ದೆಂದರೆ ಪಾಳ್ಯದ ವೆಂಕಟಾಚಲ ಪಂಡಿತರ 'ಸೀತಾರಾಘವ ವೈದ್ಯಶಾಲೆ'. ಅದು ಮೈಸೂರಿನಲ್ಲಿ ಸ್ಥಾಪನೆಯಾದದ್ದು 1900ರ ಸುಮಾರಿಗೆ. ಅಲ್ಲಿ ಸಿದ್ಧವಾದ ಔಷಧಿಗಳು ಬೇಗನೆ ಪ್ರಸಿದ್ಧವಾದುವು. ಸಂಸ್ಥೆಯ ಕೀರ್ತಿ ಇಂದಿಗೂ ಉಳಿದಿದೆ. ಪಾಳ್ಯದ ಪಂಡಿತರ ಬಳಿ ಕರ್ಮಾಭ್ಯಾಸಮಾಡಿ 1915ರ ಸುಮಾರಿಗೆ ಮುಗಿಸಿದ ನಂಜನಗೂಡು ಬಿ.ವಿ. ಪಂಡಿತರು ತಮ್ಮೂರಿಗೆ ಹಿಂದಿರುಗಿ 'ಸದ್ವೈದ್ಯಶಾಲೆ'ಯನ್ನು ಔಷಧಿಗಳ ತಯಾರಿಕೆಗಾಗಿಯೇ ವ್ಯವಸ್ಥೆಮಾಡಿದರು. ಇಲ್ಲಿ ತಯಾರಾದ ಕೆಲವೊಂದು ಔಷಧಿಗಳಿಗೆ ಜಗತ್ತಿನಲ್ಲೆಲ್ಲ ಖ್ಯಾತಿ ಒದಗಿದೆ. ಇವೆರಡೂ ಸಂಸ್ಥೆಗಳು ದೊಡ್ಡದಾಗಿ ಬೆಳೆದು, ಈ ಕಡೆ ಆಯುರ್ವೇದ ವೈದ್ಯದ ಅಭ್ಯಾಸ ನಡೆಯುವಂತೆ ಮಾಡಿವೆ.

ಮಂಗಳೂರಿನಲ್ಲಿ 1902ರಷ್ಟು ಹಿಂದೆಯೇ ಆರಂಭವಾದ ಇನ್ನೊಂದು ಸೊಗಸಾದ ಉದ್ಯಮ ಮೂಲ್ಕಿ ಗಣಪಯ್ಯಗಳದ್ದು. ಪಾಣಾಜೆ ಶಂಕರನಾರಾಯಣಭಟ್ಟರು ಕೇರಳದಲ್ಲಿ ಆಯುರ್ವೇದವನ್ನು ಕಲಿತು, ಕಾಡುಮೇಡುಗಳಲ್ಲಿ ಅಲೆದು ಕಷ್ಟಪಟ್ಟು ಮೂಲಿಕೆಗಳನ್ನು ಸಂಗ್ರಹಿಸಿ ಕಾಸರಗೋಡಿನಲ್ಲಿ ನೆಲೆಸಿ, 1923ರಲ್ಲಿ 'ವಸಿಷ್ಠಾಶ್ರಮ'ವನ್ನು ಹುಟ್ಟುಹಾಕಿದರು. ಈ ಸಂಸ್ಥೆಯ ಉದ್ದೇಶ ಉತ್ತಮವಾದ ಔಷಧಿಗಳನ್ನು ತಯಾರುಮಾಡುವುದೇ ಆಗಿದ್ದಿತು. ಕುಂಜಾಲು ಗುರುನಾಥ ಪ್ರಭುಗಳು ಮಹಾರಾಷ್ಟ್ರದಲ್ಲಿ ಆಯುರ್ವೇದದ ಕರ್ಮಾಭ್ಯಾಸವನ್ನು ಮುಗಿಸಿ 1926ರಲ್ಲಿ ತಮ್ಮೂರಿಗೆ ಹಿಂದಿರುಗಿ 'ಸ್ವದೇಶಿ ಔಷಧಭಂಡಾರ' ವನ್ನು ತೆರೆದರು. ಇಲ್ಲಿ ಸಿದ್ಧವಾದ ಔಷಧಿಗಳ ಯಶಸ್ಸು ದಕ್ಷಿಣದೇಶದಲ್ಲೆಲ್ಲ ಹರಡಿತು.

ಬೆಂಗಳೂರಿನ ಎಂ. ಆರ್. ಸ್ವಾಮಿ ಎಂಬ ತರುಣ



ಹಾಳ್ಯದ ವೆಂಕಟಾಚಲ ಪಂಡಿತರು



ಬಿ. ವಿ. ಪಂಡಿತರು

ಪ್ರತಿಭಾವಂತರು ಕಲ್ಕತ್ತೆಗೆ ತೆರಳಿ ಅಲ್ಲಿ ಆಯುರ್ವೇದವನ್ನು ಅಧ್ಯಯನ ಮಾಡಿ, ಬಂಗಾಳದಲ್ಲಿಯೇ ವೃತ್ತಿಯನ್ನು ಕೆಲಕಾಲ ಕೈಗೊಂಡು, 1940ರ ಸುಮಾರಿಗೆ ಕೇರಳರಾಜ್ಯದ ರಾಜಧಾನಿ ಯಾದ ತಿರುವನಂತಪುರಕ್ಕೆ ಬಂದು 'ಆಯುರ್ವೇದಿಕ್ ಟಂಕ್ಚರ್ಸ್' ಎಂಬ ಸಂಸ್ಥೆಯನ್ನು ಶುರುಮಾಡಿದರು. ಆದರೆ ಇದು ಬೇರೂರಿ ಕೊಳ್ಳದೆ ಬೇಗನೆ ಮರೆಯಾಗಿಬಿಟ್ಟಿತು. ಪಂಡಿತ ತಾರಾನಾಥರಲ್ಲಿ ಶಿಷ್ಯವೃತ್ತಿ ಮಾಡಿದ ಕೃಷ್ಣ ಸುಬ್ಬಣ್ಣಭಟ್ಟರು ಚಿಕ್ಕಮಗಳೂರಿ ನಲ್ಲಿ 1943ರಂದು 'ತಾರಾನಾಥ ಭೇಷಜಾಲಯ'ವೆಂಬ ಸಂಸ್ಥೆಯ ಹೊಣೆಯನ್ನು ಹೊತ್ತರು. ಆಯುರ್ವೇದದ ಸಿದ್ಧೌಷಧಿಗಳನ್ನು ತಯಾರುಮಾಡುವ ಉದ್ದೇಶದಿಂದ ಶುರುವಾದ ಈ ಸಂಸ್ಥೆ ಮೂರುವರ್ಷಗಳ ನಂತರ 'ತಾರಾನಾಥ ರಸೌಷಧಿ ವರ್ಕ್ಸ್' ಎಂಬ ಸುಪ್ರಸಿದ್ಧ ಔಷಧಿ ನಿರ್ಮಾಣ ಕಾರ್ಖಾನೆಗೆ ದಾರಿಮಾಡಿ ಕೊಟ್ಟಿತು. ತಾರಾನಾಥರ ಶಿಷ್ಯರಲ್ಲಿ ಪ್ರಮುಖರಾದ ಎಂ. ಆರ್. ಭಟ್ಟರು, ಮಳಿಯೆ ಗೋಪಾಲಕೃಷ್ಣರಾಯರು ಮೊದಲಾದವರು ಈ ಸಂಸ್ಥೆಯೊಂದಿಗೆ ನಿಕಟ ಸಂಪರ್ಕವನ್ನು ಬೆಳೆಸಿಕೊಂಡರು.

ಮಂಗಳೂರಿನಲ್ಲಿ 1920ರಲ್ಲಿ ಏರ್ಪಟ್ಟ "ರಾಮದಾಸ ಆಯುರ್ವೇದ ಫಾರ್ಮಸಿ" ಮತ್ತು ಅಲ್ಲಿಯೇ ಎಸ್.ವಿ. ನಾಯ ಕರು 1925ರಲ್ಲಿ ಆರಂಭಿಸಿದ 'ದತ್ತಾತ್ರೇಯ ಆಯುರ್ವೇದಿಕ್ ಫಾರ್ಮಸಿ', ಆದ್ಯ ಅನಂತಾಚಾರ್ಯರ ಸಾಹಸದಿಂದ ಬಿಜಾಪುರ ದಲ್ಲಿ 1945ರಂದು ಮೈದಳೆದ 'ನೂತನ ಆಯುರ್ವೇದ ಕಾರ್ಯಾಲಯ', ಮರುವರ್ಷ ಕಟಪಾಡಿಯಲ್ಲಿ ಮೊದಲಾದ 'ಭುವನೇಂದ್ರ ಪ್ರಾಡಕ್ಟ್ಸ್', ಪಾಂಗಾಳ ಲಕ್ಷ್ಮೀನಾರಾಯಣ ನಾಯಕರು 1952ರಲ್ಲಿ ಕಟಪಾಡಿಯಲ್ಲಿ ಏರ್ಪಡಿಸಿದ 'ನಾಯಕ ಆಯುರ್ವೇದಾಶ್ರಮ', ಮಂಗಳೂರಿನ ಹರಿದಾಸ ಭಂಡಾರಕರರ ಸಂಸ್ಥೆ, ಕದ್ರಿಯ 'ಮಲ್ಲಿಕಾರ್ಜುನ ಆಯುರ್ವೇದ ಸಂಸ್ಥೆ',

ಬೆಳಗಾವಿ ಬೈಲಹೊಂಗಲದ 'ಆರೋಗ್ಯಾಶ್ರಮ' ಮೊದಲಾದ ಖಾಸಗಿ ಉದ್ಯಮಗಳು ಆಯುರ್ವೇದ ಔಷಧಿಗಳನ್ನು ವೈದ್ಯರಿಗೆ ಒದಗಿಸುತ್ತಿವೆ. ಸರಕಾರದವರು ಬೆಂಗಳೂರಿನಲ್ಲಿ "ಕೇಂದ್ರ ಔಷಧ ನಿರ್ಮಾಣ ಉದ್ಯಮ" (ಸೆಂಟ್ರಲ್ ಫಾರ್ಮಸಿ) ಯನ್ನು 1958ರಲ್ಲಿ ಏರ್ಪಡಿಸಿ ಆಯುರ್ವೇದ ಮತ್ತು ಯುನಾನಿ ಪದ್ಧತಿಗಳ ಔಷಧಿಗಳನ್ನು ತಯಾರಿಸಿ ಆಯಾ ಪದ್ಧತಿಗಳ ಚಿಕಿತ್ಸಾಲಯಗಳಿಗೆ ವಿತರಣೆ ಮಾಡುತ್ತಿದ್ದಾರೆ.

ಆಯುರ್ವೇದ ಶಿಕ್ಷಣ

ಹಿಂದಿನಿಂದ ಆಯುರ್ವೇದವನ್ನು ವಿದ್ಯಾರ್ಥಿಗಳು ಸಮರ್ಥರಾದ ವೈದ್ಯರ ಬಳಿಯೇ ಕಲಿಯುವುದು ವಾಡಿಕೆಯಾಗಿದ್ದಿತು. ಗುರುಗಳಲ್ಲಿ ಶಾಸ್ತ್ರಾಭ್ಯಾಸ, ಕರ್ಮಾಭ್ಯಾಸಗಳೆರಡನ್ನೂ ಮಾಡಿ ಅವರ ಅಪ್ಪಣೆಯನ್ನು ಪಡೆದುಕೊಂಡ ಮೇಲೆ ಶಿಷ್ಯನು ತನ್ನ ಸ್ವಂತ ವೈದ್ಯವೃತ್ತಿಯನ್ನು ಆರಂಭಿಸುತ್ತಿದ್ದನು. ಇಂಥ ಸಾಂಪ್ರದಾಯಿಕ ಶಿಕ್ಷಣಪದ್ಧತಿ ಬರುಬರುತ್ತ ಹಿಂದೆಬಿದ್ದಾಗ ಶಾಲೆಗಳಲ್ಲಿ ವೈದ್ಯವನ್ನು ಕಲಿಸಬೇಕಾಗಿಬಂದಿತು. ಪಾಶ್ಚಾತ್ಯವೈದ್ಯವನ್ನು ಶಾಲೆಯಲ್ಲೇ ಕಲಿಸುವುದು ಮೊದಲಿನಿಂದಲೂ ಬಂದ ಪದ್ಧತಿ. ಇದನ್ನೆ ಆಯುರ್ವೇದಕ್ಕೂ ಅನ್ವಯಿಸಬೇಕಾಗಿ ಬಂದುದು ಅನಿವಾರ್ಯ.

ಮೈಸೂರಿನಲ್ಲಿ ಅರಸರ ಆಶ್ರಯದಲ್ಲಿ ನಡೆಯುತ್ತಿದ್ದ ಸಂಸ್ಕೃತ ಪಾಠಶಾಲೆಯಲ್ಲಿ ಆಯುರ್ವೇದವನ್ನು ಕಲಿಸುವ ವ್ಯವಸ್ಥೆಯಾದುದನ್ನು ಮೊದಲೇ ಪ್ರಸ್ತಾಪಿಸಲಾಗಿದೆ. ಇಲ್ಲಿ ವಿದ್ಯಾರ್ಥಿಗಳು ಮುಖ್ಯವಾಗಿ ಮಾಡುತ್ತಿದ್ದುದು ಶಾಸ್ತ್ರಾಭ್ಯಾಸ; ಕರ್ಮಾಭ್ಯಾಸಕ್ಕೆ ಅಷ್ಟಾಗಿ ಅವಕಾಶವಿರುತ್ತಿರಲಿಲ್ಲ. ಆದರೆ

ಇಂಥ ಶಾಲೆಯಲ್ಲಿ ಕಲಿತೇ ದೀವಿ ಗೋಪಾಲಾಚಾರ್ಯರಂಥವರು ದೇಶದಲ್ಲೆಲ್ಲ ಪ್ರಸಿದ್ಧ ವೈದ್ಯರಾದರೆಂಬುದನ್ನು ಮರೆಯಬಾರದು. ಆಯುರ್ವೇದ ಶಿಕ್ಷಣವು 1915ರಲ್ಲಿ ಸಂಸ್ಕೃತ ಪಾಠಶಾಲೆಯ ಚೌಕಟ್ಟಿನಿಂದ ಹೊರಬಂದಮೇಲೆ ಶಿಕ್ಷಣಕ್ರಮದಲ್ಲಿ ವ್ಯವಸ್ಥೆ ಹೆಚ್ಚಾಗಿ 1927ರಲ್ಲಿ ಆಯುರ್ವೇದ ವಿದ್ಯಾಶಾಲೆಯು ಕಾಲೇಜಾಯಿತು. ಕ್ರಮೇಣ ಇದು ಮುಜರಾಯಿ ಇಲಾಖೆಯ ಹಿಡಿತದಿಂದ ಪಾರಾಗಿ ಭಾರತೀಯ ವೈದ್ಯ ಸಮಿತಿಗೆ ಸೇರಿತು. ಅದೇ ಸುಮಾರಿಗೆ ಪಾಶ್ಚಾತ್ಯ ವೈದ್ಯಪದ್ಧತಿಯ ಹಲಕೆಲವು ತುಣುಕುಗಳನ್ನೂ ಆಯುರ್ವೇದದ ಪಠ್ಯಕ್ರಮದೊಳಗೆ ತುರುಕಿ ಕಲಸುಮೇಲೋಗರದ'ಸಂಮಿಶ್ರವೈದ್ಯ' ಪದ್ಧತಿಯನ್ನು ಜಾರಿಗೆ ತರುವ ಹವಣಿಕೆ ಮೊದಲಾಯಿತು. ಆದರೆ 1960ರಲ್ಲಿ ಕೇಂದ್ರಸರಕಾರವು ನೇಮಿಸಿದ ಆಯೋಗದ ಸಲಹೆಯಂತೆ ನಮ್ಮ ದೇಶದಲ್ಲೂ 1967ರಿಂದ ಐದೂವರೆ ವರ್ಷಗಳ ಶುದ್ಧ ಆಯುರ್ವೇದ ಡಿಗ್ರಿ ಶಿಕ್ಷಣವು ವಿಶ್ವವಿದ್ಯಾನಿಲಯದ ವ್ಯಾಪ್ತಿಯೊಳಗೆ ಸೇರುವಂತಾಯಿತು. ಈಗ ರಾಜ್ಯಸರಕಾರದ ಕಡೆಯಿಂದ ಮೈಸೂರು, ಬೆಂಗಳೂರು, ಬಳ್ಳಾರಿ ಕಾಲೇಜುಗಳು ನಡೆಯುತ್ತಿವೆ. ಉಡುಪಿ, ಹುಬ್ಬಳ್ಳಿ, ಗದಗ, ಬಾಗಲಕೋಟೆ, ಬೆಳಗಾವಿ ಹೀಗೆ ಕೆಲವು ಕಡೆ ಖಾಸಗಿ ಕಾಲೇಜುಗಳಿವೆ.

ಪರಂಪರೆಯ ವೈದ್ಯ ಶಿಕ್ಷಣವನ್ನೂ ಆಧುನಿಕ ಸಂಪ್ರದಾಯದ ಕ್ರಮಗಳನ್ನೂ ಕಲೆಸಿ ಶಾಸ್ತ್ರಾಭ್ಯಾಸ, ಕರ್ಮಾಭ್ಯಾಸಗಳನ್ನು ಮಾಡಿಸುವ ಯತ್ನವನ್ನು ಕೆಲವರು ಸಾಹಸಿಗಳು ನಡೆಸಿದ್ದಾರೆ. 1923ರಷ್ಟು ಹಿಂದೆಯೇ ಪಾಣಾಜೆ ಶಂಕರನಾರಾಯಣ ಭಟ್ಟರು ಕಾಸರಗೋಡಿನಲ್ಲಿ 'ವಸಿಷ್ಠಾಶ್ರಮ'ವನ್ನು ವ್ಯವಸ್ಥೆ ಮಾಡಿದ್ದು ಈ ಉದ್ದೇಶದಿಂದಲೇ. ಆದರೆ ಅದು ಕೈಗೂಡಲಿಲ್ಲ. ಪಂಡಿತ ತಾರಾನಾಥರು ತುಂಗಭದ್ರೆಯಲ್ಲಿ 1923ರಲ್ಲಿ 'ಪ್ರೇಮ ಮೆಡಿಕಲ್

ಸ್ಕೂಲ್'ನ್ನು ತೆರೆದಾಗಲೂ ಇದೇ ಉದ್ದೇಶವಿದ್ದಿತು. ಮೂರು ವರ್ಷಗಳ ಸಾಮಾನ್ಯ ಶಿಕ್ಷಣ ('ಭಿಷಗಿಂದು ಪ್ರಶಸ್ತಿ'ಗೆ), ಮತ್ತೆ ಎರಡು ವರ್ಷಗಳ ಹೆಚ್ಚಿನ ಶಿಕ್ಷಣ ('ಆಯುರ್ವೇದ ಚೂಡಾ ಮಣಿ' ಪದವಿಗೆ) ಎಂಬ ಕ್ರಮದಲ್ಲಿ ಆಯುರ್ವೇದ ವೈದ್ಯಕ್ಕೆ ಸಂಬಂಧಪಟ್ಟ ಇತರ ಶಾಸ್ತ್ರಪರಿಚಯುವನ್ನೂ ಮಾಡಿಸಿಕೊಡುವ ವ್ಯವಸ್ಥೆಯನ್ನು ಮಾಡಿದ್ದರು. ಶಿಕ್ಷಣದ ಪದ್ಧತಿಯು ಬಹು ಮಟ್ಟಿಗೆ ಗುರುಕುಲದಂತೆಯೇ ಇದ್ದಿತು. ಅವರ ಗೆಳೆಯರಾದ ದತ್ತಾತ್ರೇಯ ಭಾರದ್ವಾಜರು ಬೆಂಗಳೂರಿಗೆ ಬಂದು 1938ರಲ್ಲಿ 'ರಾಮಕೃಷ್ಣ ವಿದ್ಯಾಪೀಠ'ವನ್ನು ತೆರೆದಾಗಲೂ ಅವರ ದೃಷ್ಟಿ ಯಲ್ಲಿದ್ದುದು ಇಂಥ ಶಿಕ್ಷಣವೇ. ತಾರಾನಾಥರ ಇನ್ನೊಬ್ಬ ಶಿಷ್ಯ ಸ್ವಾಮಿರಾಯಾಚಾರ್ಯರು ಬಳ್ಳಾರಿಯಲ್ಲಿ 1947ರಲ್ಲಿ 'ಆಯು ರ್ವೇದ ವಿದ್ಯಾಪೀಠ' ವನ್ನೂ, ಮುಂದೆ 1961ರಲ್ಲಿ ತಾರಾನಾಥರ ಮತ್ತೊಬ್ಬ ಶಿಷ್ಯ ಗೋಪಾಲಕೃಷ್ಣರಾಯರು ಬೆಂಗಳೂರಿನಲ್ಲಿ 'ಆಯುರ್ವೇದ ಪ್ರತಿಷ್ಠಾನವನ್ನು ಸ್ಥಾಪಿಸಿ ಕಾಲೇಜನ್ನು ನಡೆಸ ತೊಡಗಿದಾಗ ಅವರ ಸಂಕಲ್ಪವೂ ಹೀಗೆಯೇ ಇದ್ದಿತು.

ನಮ್ಮ ಕಾಲದಲ್ಲಿ ಆಯುರ್ವೇದ ಪುನರುಜ್ಜೀವನದ ಕನಸನ್ನು ಕಂಡ ಹಿರಿಯರಿಗೆ ಇದೇ ದೃಷ್ಟಿಯಿದ್ದಿತು. ಸರಕಾರದ ಆಯುರ್ವೇದ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ವೈ. ಲಕ್ಷ್ಮೀ ನರಸಿಂಹಶಾಸ್ತ್ರಿಗಳೂ ಈ ಹಂಬಲವನ್ನು ಹೊಂದಿದ್ದರು. ಮೈಸೂರಿನಲ್ಲಿ 1958ರಲ್ಲಿ ವ್ಯವಸ್ಥಿತವಾದ ಆಯುರ್ವೇದ ಮಹಾ ವಿದ್ಯಾಲಯ, ಗುಂಡಾಚಾರ್ಯ ಸವಣೂರರ ಕರ್ನಾಟಕ ಆಯುರ್ವೇದ ವಿದ್ಯಾಪೀಠ, ದಾಮೋದರ ಹಲಸೀಕರರ ಆಯು ರ್ವೇದ ಮಹಾವಿದ್ಯಾಲಯ, ಇವೆಲ್ಲವೂ ಈ ಹಿರಿದಾಸೆಯನ್ನಿರಿಸಿ ಕೊಂಡೇ ಮೈದಳೆದವು. ಆದರೆ ಇವೆಲ್ಲ ಪ್ರಯತ್ನಗಳೂ ವಿಫಲ ವಾದುವು. ಲೋಕದ ಮನೋವೃತ್ತಿ, ಸರಕಾರದ ಧೋರಣೆ.

ವರಿಷ್ಠರೆನಿಸಿಕೊಂಡವರ ದುರಾಗ್ರಹ, ರಾಜಕಾರಣಿಗಳ ಚೆಲ್ಲಾಟ, ವೈದ್ಯರಲ್ಲೇ ಈರ್ಷ್ಯೆ–ಸ್ಪರ್ಧೆ ಇವೆಲ್ಲ ಅಡ್ಡಿ ಬಂದುವು. ಆಯು ರ್ವೇದ ವೈದ್ಯಶಿಕ್ಷಣವು ವೃತ್ತಿನಿಷ್ಠವಾಗಿ, ಆದರ್ಶ ವೈದ್ಯ ನೊಬ್ಬನ ಪ್ರಭಾವದೊಳಗಿದ್ದರೆ ಫಲಕಾರಿಯಾದೀತು. ಬೇರೆ ವೈದ್ಯದಂತಲ್ಲದೆ, ಆಯುರ್ವೇದದಲ್ಲಿ ದರ್ಶನ, ಯೋಗ, ಮಂತ್ರ, ಜ್ಯೋತಿಷ್ಯಗಳೂ ಸೇರುತ್ತವೆ. ಆಧ್ಯಾತ್ಮಿಕವಾದ ಆವರಣ ದೊಳಗೆ ಬೆಳೆದರೇ ಆಯುರ್ವೇದ ವಿದ್ಯಾರ್ಥಿಯು ಸರಿಯಾದ ದಾರಿಯನ್ನು ಗುರುತಿಸಿಯಾನು. ಏಕೆಂದರೆ ಆಯುರ್ವೇದವು ಬರಿಯ ಚಿಕಿತ್ಸೆಯಲ್ಲಿ ಮುಗಿಯದೆ ಸ್ವಸ್ಥವೃತ್ತದ ಹಂದರವನ್ನು ಹಬ್ಬಿಸಲು ನೆರವಾಗಬೇಕು. ಆಯುರ್ವೇದ ನಮ್ಮ ಸಂಸ್ಕೃತಿಯ ಅವಿಭಾಜ್ಯವಾದ ಒಂದು ಅಂಗವೆಂಬುದನ್ನು ಮರೆಯಬಾರ ದಲ್ಲವೆ ?

ಈ ಚೌಕಟ್ಟಿನಲ್ಲಿಯೇ ಅದನ್ನು ಕಾಣಬೇಕು, ಕಲಿಯ ಬೇಕು, ಕಲಿಸಬೇಕು ; ಹಾಗಾದರೆ ಮಾತ್ರ ಆಯುರ್ವೇದ ಸಾರ್ಥಕವಾಗುತ್ತದೆ.

ಇಂದು ನೇತ್ರಚಿಕಿತ್ಸೆಯಲ್ಲಿ ಆಂದೋಲನವನ್ನೇ ಉಂಟು ಮಾಡಿರುವ ಡಾ. ಎಂ. ಸಿ. ಮೋದಿಯವರು ಆಯುರ್ವೇದದವ ರೆಂಬುದನ್ನು ಬಹುಮಂದಿ ಅರಿಯರು. ಬಿಜಾಪುರ ಜಿಲ್ಲೆಯ ಮುರಘರಾಜೇಂದ್ರ ಚೆನ್ನವೀರಪ್ಪ ಮೋದಿಯವರು ಬೆಳ ಗಾವಿಯ ಆಯುರ್ವೇದ ವಿದ್ಯಾಪೀಠದಲ್ಲಿ ಕಲಿತು, 'ಭಿಷಗ್ವರ' ಪದವಿಯನ್ನು ಪಡೆದುಕೊಂಡಿದ್ದಾರೆ. ಅವರು ಸಮರ್ಥರಷ್ಟೇ ಅಲ್ಲದೆ ಸುಸಂಸ್ಕೃತರೂ ಉದಾರ ಹೃದಯದವರೂ ಹೌದು. ಹಳೆಯ ಆಯುರ್ವೇದ ವೈದ್ಯರ ಸೇವಾಮನೋವೃತ್ತಿ ಅವರಲ್ಲಿ ರೂಢಮೂಲವಾಗಿದೆ. ಮಂಗಳೂರಿನಲ್ಲಿ ಕರ್ನಾಟಕ ಪ್ರಾದೇಶಿಕ ಆಯುರ್ವೇದ ಮಂಡಲದ ಇಪ್ಪತ್ತನಾಲ್ಕನೆಯ ಸಮ್ಮೇಳನವು

1963ರಲ್ಲಿ ಜರುಗಿದಾಗ ಅವರು ಅಧ್ಯಕ್ಷರಾಗಿದ್ದರು. ಆಗ ತಮ್ಮ ಭಾಷಣದಲ್ಲಿ ಅವರು ಆಯುರ್ವೇದ ಶಿಕ್ಷಣವನ್ನು ಕುರಿತು ಕೆಲವು ಮಾತುಗಳನ್ನಾಡಿದ್ದಾರೆ. ಈಗಿನ ಆಯುರ್ವೇದ ವಿದ್ಯಾಭ್ಯಾಸದ ಕುಂದುಕೊರತೆಗಳನ್ನು ಗಮನಿಸಿ ಅವರು,

"ಪ್ರಾಚೀನ ಆಯುರ್ವೇದ ಶಾಸ್ತ್ರಕಾರರು ಅಷ್ಟಾಂಗಗಳಿಂದ ಯುಕ್ತವಾದ ಆಯುರ್ವೇದವನ್ನು ಪ್ರತಿಪಾದಿಸಿದ್ದಾರೆ. ಇಂಥ ಅಷ್ಟಾಂಗ ಆಯುರ್ವೇದವನ್ನು ನಮ್ಮ ವಿದ್ಯಾರ್ಥಿಗಳಿಗೆ ಸಮಗ್ರವಾಗಿ ಕಲಿಸಬೇಕು" ಎಂದಿದ್ದಾರೆ.

ಶಿಕ್ಷಣ ಸಂಸ್ಥೆಗಳ ಮತ್ತು ಶಿಕ್ಷಣದ ಹೊಣೆ ಹೊತ್ತಿರುವ ಅಧಿಕಾರಿಗಳೂ, ಅಧ್ಯಾಪಕರೂ ಈ ಮಾತುಗಳನ್ನು ಸಾವಧಾನವಾಗಿ ಪರಿಶೀಲಿಸುವುದೊಳ್ಳೆಯದು. ಕೊನೆಯ ಮಾತಾಗಿ ಅವರೇ ಹೀಗೆ ಹೇಳಿದ್ದಾರೆ—

"ಆಯುರ್ವೇದ ಶಾಸ್ತ್ರದ ಅಭಿವೃದ್ಧಿ, ಸಂಶೋಧನ, ವ್ಯವಸಾಯ ಮತ್ತು ಜನಸೇವೆ ಇವುಗಳಿಗಾಗಿ ವೈದ್ಯರೆಲ್ಲರೂ ಸಂಘಟಿತರಾಗಿ ಪ್ರಯತ್ನಿಸಬೇಕು."

ವೈದ್ಯರೆಲ್ಲರೂ ಸಂಘಟಿತರಾಗಿ ಇದನ್ನು ಸಾಧಿಸುವುದು ಇನ್ನೂ ನಡೆದಿಲ್ಲ. ಆದರೆ ಈ ವಿಚಾರ ಮಾತನಾಡುವಾಗ ಮಲ್ಲಾಡಿಹಳ್ಳಿಯ ರಾಘವೇಂದ್ರ'ಸ್ವಾಮಿ'ಗಳ ನೆನಪು ಬರುತ್ತದೆ. ಚಿತ್ರದುರ್ಗಜಿಲ್ಲೆಯ ಮಲ್ಲಾಡಿಹಳ್ಳಿಯಲ್ಲಿ 1944ರ ಸುಮಾರಿಗೆ ಶುರುವಾದ 'ಅನಾಥ ಸೇವಾಶ್ರಮ'ವೆಂಬ ವ್ಯಾಪಕವಾದ ಸಂಸ್ಥೆಯಿದೆ. ಒಂದು ಸಂಸ್ಥೆ ಎನ್ನುವುದಕ್ಕಿಂತ ಸಂಸ್ಥೆಗಳ ಒಕ್ಕೂಟ ಎಂದರೆ ಸರಿಯೇನೋ! ಇಲ್ಲಿ ಆಯುರ್ವೇದ ಚಿಕಿತ್ಸಾಲಯವೂ ರುಗ್ಣಾಲಯವೂ ಔಷಧಿ ನಿರ್ಮಾಣಶಾಲೆಯೂ ಇವೆ. ಪ್ರತಿ ಸೋಮವಾರವೂ ಆಯುರ್ವೇದ ಪದ್ಧತಿಯಂತೆ ರೋಗಿಗಳ ಪರೀಕ್ಷೆ, ಚಿಕಿತ್ಸೆಗಳ ಸಲಹೆ, ಔಷಧಿಗಳ ವಿತರಣೆ ನಡೆಯು

ತ್ತವೆ. ಇವೆಲ್ಲವೂ ಉಚಿತವಾಗಿಯೇ ನಡೆಯುತ್ತವೆ. ಅಗತ್ಯ ಬಿದ್ದರೆ ರೋಗಿಗಳು ರುಗ್ಣಾಲಯದಲ್ಲಿ ತಂಗಿ ಉಪಚಾರ ಪಡೆಯುತ್ತಾರೆ - ಇದೂ ಉಚಿತವಾಗಿಯೇ.

ಇವನ್ನೆಲ್ಲ ನೋಡಿಕೊಳ್ಳುವವರು ರಾಘವೇಂದ್ರಸ್ವಾಮಿಗಳು ಮತ್ತು ಅವರ ಶಿಷ್ಯರಾದ ಸೂರುದಾಸರು. ಈ ಸ್ವಾಮಿಗಳು ಮೊದಲಿಗೆ ಮಲ್ಲಾಡಿಹಳ್ಳಿಯವರಲ್ಲ. ಕನ್ನಡ ನಾಡಿನಲ್ಲಿ 1935ರ ವೇಳೆಗೆ ಇದ್ದಕ್ಕಿದ್ದಂತೆ ಕಾಣಿಸಿಕೊಳ್ಳುವ ಮೊದಲು ಅವರ ಬಾಳಕಥೆ ಅಷ್ಟಾಗಿ ತಿಳಿಯದು. ಇಲ್ಲಿ ಅವರು ಕಾಣಿಸಿಕೊಂಡಾಗ ಅವರು ವ್ಯಾಯಾಮದ ಮಾಸ್ತರು, ಯೋಗಪಟುಗಳು. ನಿತ್ಯಾನಂದರು, ಪಳನಿಸ್ವಾಮಿಗಳು, ಮಾಣಿಕ್ಯರಾಯರು ಮೊದಲಾದವರಿಂದ ಅಧ್ಯಾತ್ಮ, ಯೋಗ, ಅಂಗಸಾಧನೆ, ಆಯುರ್ವೇದಗಳನ್ನು ಕಲಿತು, ಮಲ್ಲಾಡಿಹಳ್ಳಿಗೆ ಮನಸೋತು ಅಲ್ಲಿ ತಮ್ಮ 'ತಿರುಕನ' ಆಶ್ರಮವನ್ನು ಪರಪ್ಪಸ್ವಾಮಿ ಮಠದ ಮೂಲದಿಂದ ಬೆಳೆಸಿಕೊಂಡು ಬಂದಿದ್ದಾರೆ. ಇಲ್ಲಿ ಯೋಗ ಮತ್ತು ಆಯುರ್ವೇದದ ನೆಲೆಗಟ್ಟು ಬೇರೂರಿ ನಿಂತಿದೆ. ಈಚೆಗೆ ಅವರ ಲೇಖನಿಯಿಂದ ಹೊರಬಂದ 'ಸ್ವಯಂವೈದ್ಯ'ವನ್ನು ಆಯುರ್ವೇದ ಸಾಹಿತ್ಯದಲ್ಲಿ ನಾಯಕಗ್ರಂಥವೆನ್ನಬಹುದು.

ಜಾನಪದ ನೆಲೆಯಿಂದಲೇ ಎದ್ದುಕೊಂಡು ಶಾಸ್ತ್ರದ ಹೆಮ್ಮರದ ಆಸರೆಯನ್ನೂ ಪಡೆದುಕೊಂಡು ಹಳ್ಳಿಹಳ್ಳಿಗಳಲ್ಲಿ ಹರಡಿದ್ದ ಆಯುರ್ವೇದವನ್ನು ಮತ್ತೆ ಅದೇ ನೆಲೆಯಲ್ಲಿಯೇ ಬೇರೂರಿಸಲು, ಅದನ್ನು ಎತ್ತಿಹಿಡಿಯಲು ಇವರು ಶ್ರಮಿಸುತ್ತಿದ್ದಾರೆ. ಆಯುರ್ವೇದ ಔಷಧ ನಿರ್ಮಾಣ ಈ ಆಶ್ರಮದಲ್ಲಿ ಗೃಹಕೈಗಾರಿಕೆಯಂತೆಯೇ ನಡೆಯುತ್ತಿದೆ. ಮೂಲಿಕಾಸಂಗ್ರಹವನ್ನು ತಾವೇ ಕೈಗೊಳ್ಳುತ್ತಾರೆ. ಅವರಿಗೆ ಶಾಸ್ತ್ರಪರಿಚಯವಂತೂ ಆಳವಾಗಿಯೇ ಇದೆ. ಇಂಥವರ ಬಳಿ ಆಯುರ್ವೇದ

ವಿದ್ಯಾರ್ಥಿಗಳು ಕರ್ಮಾಭ್ಯಾಸ ಮಾಡಿದರೆ ಸಂಶೋಧನೆ, ವ್ಯವಸಾಯ, ಜನಸೇವೆ ಮೂರರ ಪರಿಚಯವೂ ಆದೀತು.

ಆಯುರ್ವೇದ ನಾಡಿನ ವೈದ್ಯ. ಅದು ಉಳಿಯಬೇಕೆಂದರೆ ಆಧ್ಯಾತ್ಮಿಕ ಹಿನ್ನೆಲೆಯಲ್ಲೇ, ಸೇವಾಬುದ್ಧಿಯಿಂದಲೇ. ಪಂಡಿತ ತಾರಾನಾಥರು ಕೈಗೊಂಡ ಕೆಲಸ, ಮಲ್ಲಾಡಿಹಳ್ಳಿ ಸ್ವಾಮಿಗಳು ನಡೆಸುತ್ತಿರುವ ಆಶ್ರಮ, ಮಳಿಯೆ ಗೋಪಾಲಕೃಷ್ಣರಾಯರಂಥವರು ನಡೆಸುತ್ತಿರುವ ಉಚಿತ ಚಿಕಿತ್ಸೆ, ಎಂ. ಸಿ. ಮೋದಿಯವರ ಸಾರ್ವಜನಿಕ ಸೇವೆ ಇವನ್ನೆಲ್ಲ ನೋಡಿದಾಗ ನಮ್ಮ ನಾಡಿನಲ್ಲಿ ಆಯುರ್ವೇದಕ್ಕೆ ಇನ್ನೂ ಭವಿಷ್ಯವಿದೆ ಎನಿಸುತ್ತದೆ.

ಕನ್ನಡನಾಡು ಮತ್ತು ಕನ್ನಡಿಗರ ಪರಂಪರೆ

1980ರ ಪ್ರಕಟಣೆಗಳು

ಕರ್ನಾಟಕದ ಜನಪದ ವಾದ್ಯಗಳು	ಡಾ. ಜಿ. ಶಂ. ಪರಮಶಿವಯ್ಯ
ಎಂ. ಎಚ್. ಕೃಷ್ಣ	ಕೆ. ಜಿ. ನಾಗರಾಜನ್
ಎಸ್. ಶ್ರೀಕಂಠಶಾಸ್ತ್ರಿ	ಎಸ್. ಆರ್. ಕೃಷ್ಣಮೂರ್ತಿ
ಟಿ. ಆರ್. ರಾಮಯ್ಯ	ಎಸ್. ಆರ್. ಕೃಷ್ಣಮೂರ್ತಿ
ಕರ್ನಾಟಕ ವ್ಯವಸಾಯ ಉಪಕರಣಗಳು	ಹ. ಕ. ರಾಜೇಗೌಡ
ಕರಪಾಲದವರು	ಡಾ. ಡಿ. ಕೆ. ರಾಜೇಂದ್ರ
ಸ್ವಾದಿ	ಗೋಪಾಲಕೃಷ್ಣ ಹೆಗಡೆ
ಮುಂಡಾಜೆ ರಂಗನಾಥ ಭಟ್ಟರು	ಕೆ. ಎನ್. ಭಟ್, ಶಿರಾಡಿಪಾಲ್
ರಾಜ ಒಡೆಯರು	ಬ. ನ. ಸುಂದರರಾವ್
ಸಿ. ಬಿ. ಮಲ್ಲಪ್ಪ	ಎಂ. ವಿ. ನಾಗರಾಜರಾವ್
ಕಿನ್ನರಿ ಜೋಗಿಗಳು	ಡಾ. ಜಿ. ಶಂ. ಪರಮಶಿವಯ್ಯ
ಕ್ಷಮಾಪತಿ ರಾಮರಾಯ	ಡಾ. ಶಿವಾನಂದ ಗುಬ್ಬಣ್ಣವರ
ಕರ್ನಾಟಕದಲ್ಲಿ ವಯಸ್ಕರ ಶಿಕ್ಷಣ	ಟಿ. ಆರ್. ನಾಗಪ್ಪ
ಹಾಲಕ್ಕಿ ಒಕ್ಕಲಿಗರು	ಎಲ್. ಜಿ. ಭಟ್
ಕರ್ನಾಟಕದಲ್ಲಿ ಗಾಂಧೀಜಿ ಪ್ರಭಾವ	ವಿ. ಎಸ್. ನಾರಾಯಣರಾವ್
ರಣವಾದ್ಯಗಳು	ಡಾ. ಕೆ. ಶ್ರೀಕಂಠಯ್ಯ
ಬಂದಾನವಾಜ್	ಜಯತೀರ್ಥ ರಾಜಪುರೋಹಿತ
ಸಚ್ಚಿದಾನಂದೇಂದ್ರ ಸ್ವಾಮಿಗಳು	ಎನ್. ಎಸ್. ರಾಮಪ್ರಸಾದ್